ಸಂಪುಟ : 8 ಸಂಚಿಕೆ : 196 ಪುಟ : 4 ಬೆಲೆ : 3.00 ಶುಕ್ರವಾರ ಸಪ್ಟೆಂಬರ್ 08, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 196 Pages : 4 Price : 3.00 Friday September 08, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಸೆಪ್ಟೆಂಬರ್ 8 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ**

ವಾರ್ಡ್ ನಂ. 07ರ ಪೆಂಡಾರ ಓಣಿ, ಮಲ್ಲೇಶಪ್ಪನ ಲೈನ್, ನಂದರಗಿ ಲೈನ್, ಅಬ್ಬಿಗೇರಿ ಲೈನ್, ಗಚ್ಚಿಯವರ ಲೈನ್, ಬಚ್ಚಲಕ್ಕಮ್ಮನ ಗುಡಿ ಲೈನ್, ಚೆನ್ನೆಗೌಡ್ರ ಲೈನ್, ಹುಚ್ಚನಗೌಡ್ರ ಓಣಿ,

ವಾರ್ಡ್ ನಂ. 16ರಲ್ಲಿ ಹೊಂಬಳನಾಕಾ, ಮಣ್ಣಮ್ಮನವರ ಲೈನ್, ಶೌಚಾಲಯ ಹಿಂದಿನ ಭಾಗ ಭಟ್ಟರ ಲೈನ್, ಅಡ್ಡೇದ ಲೈನ್, ವಾರ್ಡ್ ನಂ. 35ರಲ್ಲಿ ಧೋಬಿ ಘಾಟ್ 1ನೇ ಕ್ರಾಸ್, ಈಶ್ವರಗುಡಿ ಲೈನ್, ಇ.ಡಬ್ಲ್ಯೂ.ಎಸ್. ಲೈನ್, 2ನೇ ಕ್ರಾಸ್, 3ನೇ ಕ್ರಾಸ್, ಹನಮಂತ ದೇವರಗುಡಿ ಲೈನ್, ವಾರ್ಡ್ ನಂ. 11, 12 ಇರಾಣಿ ಕಾಲೋನಿಯ ಕರಿಯಮ್ಮನಕಲ್ಲು, ಪಿ.&ಟಿ. ಕ್ವಾಟರ್ಸ್ ಹಿಂದಿನ ಭಾಗ, ಚರ್ಚ್ ಲೈನ್, ನಾಗಪ್ಪನ ಕಟ್ಟಿ ಲೈನ್, ಗಣೇಶ ಲೈನ್, ಉಳಿದ ಭಾಗಗಳು, ವಾರ್ಡ್ ನಂ.1 ರಲ್ಲಿ ಎಸ್.ಎಮ್. ಕೃಷ್ಣ ನಗರ ಕೆಳಗಿನ ಭಾಗಗಳು ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆ ತಿಳಿಸಿದೆ.

## ಬೆಳೆ ಪ್ರಶಸ್ತಿಗಾಗಿ ಆಸಕ್ತ ರೈತ/ರೈತ ಮಹಿಳೆಯರಿಂದ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನಲ್ಲಿ ಬೆಳೆ ಪ್ರಶಸ್ತಿ ಕಾರ್ಯಕ್ರಮದಡಿ ಆಸಕ್ತ ರೈತ / ರೈತ ಮಹಿಳೆಯರಿಂದ ಪ್ರತ್ಯೇಕವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮುಂಗಾರು ಹಂಗಾಮಿನ ಬೆಳೆಗಳಾದ ಮುಸುಕಿನಜೋಳ ಬೆಳೆಗೆ ಸ್ಪರ್ಧಿಸಲು ಕೊನೆಯ ದಿನಾಂಕ ಸೆಪ್ಟೆಂಬರ್ 15 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ ಅರ್ಜಿ ಪಡೆಯಬಹುದು ಎಂದು ಜಂಟಿ ಕೃಷಿ ನಿರ್ದೇಶಕರಾದ ತಾರಾಮಣಿ ಜಿ. ಹೆಚ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬೆಳೆ ವಿಮಾ ಪರಿಹಾರ ನೀಡದ ಇನ್ಸುರೆನ್ಸ್ ಕಂಪನಿ ವಿರುದ್ಧ ರೈತರ ಆಕ್ರೋಶ

# ರೈತರಿಗೆ ಗಾಯದ ಮೇಲೆ ಬರೆಯ ಬಿಸಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಇಲ್ಲಿನ ರೈತ ಸಂಪರ್ಕ ಕೇಂದ್ರದಲ್ಲಿ ನಡೆದ ಸಭೆಯಲ್ಲಿ ಬೆಳೆ ನಷ್ಟವಾಗಿದ್ದರೂ ಪರಿಹಾರ ನೀಡದ ಬಜಾಜ್ ಇನ್ಸುರೆನ್ಸ್ ಕಂಪನಿ ವಿರುದ್ಧ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿ, ಕಂಪನಿಯ ಅಧಿಕಾರಿಗಳನ್ನು ತರಾಟೆಗೆ ತೆ-ಗೆದುಕೊಂಡ ಘಟನೆ ಗುರುವಾರ ನಡೆಯಿತು.



ಹಣ ತುಂಬಿಸಿಕೊಳ್ಳುವಾಗ ಇನ್ನಿಲ್ಲದಂತೆ ಬಣ್ಣ ಕಟ್ಟಿ, ಕಥೆ ಹೇಳಿ ಹಣ ತುಂಬಿಸಿಕೊಳ್ಳುತ್ತಾರೆ. ಆದರೆ ರೈತರು ಕಷ್ಟದಲ್ಲಿದ್ದಾಗ ಮಾತ್ರ ಇವರು ನಮ್ಮನ್ನು ತಿರುಗಿಯೂ ನೋಡುವುದಿಲ್ಲ. ಆದ್ದರಿಂದ ಈ ಕಂಪನಿಯನ್ನೇ ವಿಮಾ ಪ್ರಕ್ರಿಯೆಯಿಂದ ಹೊರಕ್ಕೆ ಹಾಕಿ ಎಂದು ರೈತರು ಸಹಾಯಕ ನಿರ್ದೇಶಕರನ್ನು ಆಗ್ರಹಿಸಿದರು. ಕಂಪನಿಯ ಜಿಲ್ಲಾ ವ್ಯವಸ್ಥಾಪಕ ಪವನಸಿಂಗ್ ಮಾತನಾಡಿ, ಯಾರು ನಮಗೆ ಈ ಬಗ್ಗೆ ದೂರು ಸಲ್ಲಿಸಿದ್ದಾರೋ ಅವರಿಗೆ ಪರಿಹಾರದ ಹಣ ಬಿಡುಗಡೆ ಆಗಿದೆ ಎಂದರು.

ರೈತ ಚಂದ್ರಶೇಕರಪ್ಪ ಕುಷ್ಟಗಿ ಮಾತನಾಡಿ, ಈ ಬಗ್ಗೆ ದೂರು ಕೊಡಬೇಕೆಂಬುದನ್ನು ನೀವು ಯಾರಿಗೆ ತಿಳಿಸಿದ್ದೀರಿ? ಇದು ನಮಗೆ ಗೊತ್ತಿಲ್ಲ. ನೀವು ನಮ್ಮ ಹಣವನ್ನು ನುಂಗುವದಕ್ಕೆ ಮಾಡುತ್ತಿರುವ ಮಸಲತ್ತು ಎಂದು ಸಿಟ್ಟಾಗುತ್ತಿದ್ದಂತೆ, ವ್ಯವಸ್ಥಾಪಕ ಪವನಸಿಂಗ್, ಇದು ಬ್ಯಾಂಕಿನವರ ಕರ್ತವ್ಯ. ಹಣ ತುಂಬಿಸಿಕೊಳ್ಳುವ ಬ್ಯಾಂಕಿನವರು ಈ ಬಗ್ಗೆ ರೈತರಿಗೆ ಮಾಹಿತಿ ನೀಡಬೇಕು. ಹೊರತಾಗಿ, ನಾವೇನೂ ಮಾಡುವಂತಿಲ್ಲ ಎಂಬ ಉಡಾಫೆಯ ಉತ್ತರ ನೀಡುತ್ತಿದ್ದಂತೆ, ಶಿವನಗೌಡ ಪಾಟೀಲ, ಬಾಳಪ್ಪ ಸೋಮಗೊಂಡ, ಜಗದೀಶ ಸಂಕನಗೌಡ್ರ, ಮಲ್ಲರಡ್ಡೆಪ್ಪ ರಡ್ಡೇರ, ಶಿದ್ದಯ್ಯ ಅರಳೆಲೆ ಮಠ, ಅಶೋಕ ಧರ್ಮಾಯತ, ಅಂದಪ್ಪ ವೀರಾಪೂರ, ಎಂ.ಎಸ್ ದಢೇಸೂರಮಠ, ಶಶಿಧರ ಓದುಸೂಮಠ, ಮಂಜುನಾಥ ಸೋಮಗೊಂಡ ಮುಂತಾದವರು ವ್ಯವಸ್ಥಾಪಕರನ್ನು ತರಾಟೆಗೆ ತೆಗೆದುಕೊಂಡರು.

ಬ್ಯಾಂಕಿಗೆ ಬರುವ ಪ್ರತಿ ರೈತನಿಗೂ ನಿಮ್ಮ ಕಂಪನಿಯ ವಿವರಗಳನ್ನು ಹೇಳುತ್ತ ಕೂಡ್ರಲು ಆಗುತ್ತೇನ್ರಿ? ನೀವೆಂದಾದರೂ ಬ್ಯಾಂಕಿಗೆ ಹೋಗಿದ್ದೀರೇನ್ರಿ? ಎಂಬ ಮಾತುಗಳನ್ನು ಕೇಳುತ್ತಿದ್ದಂತೆ ವ್ಯವಸ್ಥಾಪಕರು ತೆಪ್ಪಗಾದರು. ಈ ಕುರಿತು ರೈತರಲ್ಲಿ ಜಾಗೃತಿ ಮೂಡಿಸುವುದು ತಾಲೂಕಾ ಸಮನ್ವಯಾಧಿಕಾರಿಯ ಕೆಲಸ. ಅವರು ಈ ಕಾರ್ಯವನ್ನು ಮಾಡಿದ್ದಾರೆ ಎಂದು ವ್ಯವಸ್ಥಾಪಕ ಸಲೀಂಸಾಬ್ ಪ್ರತಿಕ್ರಿಯಿಸಿದರು. ಸಮನ್ವಯಾಧಿಕಾರಿ ಫಕೀರಸಾಬ ಗುರಿಕಾರ ಅವರೆಡೆಗೆ ತಿರುಗಿದ ರೈತರು, ಎಲ್ಲಿ, ಯಾವಾಗ, ಎಷ್ಟು ಜನರನ್ನು ಸೇರಿಸಿ ಸಭೆ ನಡೆಸಿದ್ದೀರಿ ಎಂದು ದಬಾಯಿಸಿದರು. ಸಮನ್ವಯಾಧಿಕಾರಿಯ ಹಾರಿಕೆಯ ಉತ್ತರಗಳಿಂದ ಇನ್ನಷ್ಟು ಸಿಟ್ಟಾದ ರೈತರು, ತಕ್ಷಣ ಈ ಕಂಪನಿಯನ್ನು ನಿಮ್ಮ ವಿಮಾ ಕ್ರಿಯೆಯಿಂದ ಹೊರಕ್ಕೆ ಹಾಕಿ ಎಂದು ಆಗ್ರಹಿಸಿದರು.

ಈ ನಡುವೆ ರೈತ ಬಾಳಪ್ಪ ಸೋಮಗೊಂಡ ಮಾತನಾಡಿ, ಈ ಕಂಪನಿಯವರು ಕೇವಲ ನೀರಾವರಿ ಹೊಲದಲ್ಲಿನ ಬೆಳೆ ನಾಶದ ಪರಿಹಾರ ಹಣ ನೀಡಿದ್ದಾರೆ. ಮತ್ತೆ ಒಣ ಬೇಸಾಯದ ರೈತರು ಏನು ಮಾಡಬೇಕು? ನಾವೂ ಸಹ ಹಣ ತುಂಬಿದ್ದೇವೆ. ನಮಗೂ ಪರಿಹಾರದ ಹಣ ಬಿಡುಗಡೆ ಮಾಡಿಸಲು ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳನ್ನು ಆಗ್ರಹಿಸಿದರಲ್ಲದೆ, ನಮಗೆ ಪರಿಹಾರ ಬೇಕೇ ಬೇಕು ಎಂದು ಪಟ್ಟು ಹಿಡಿದು ಕುಳಿತರು. ಇದರಿಂದ ಅಧಿಕಾರಿಗಳು ಮುಜುಗುರಕ್ಕೊಳಗಾದರು. ಸ್ಥಳದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಾಗದೇ ಇರುವುದರಿಂದ, ಮುಂದೇನಾಗುವುದೋ ಎಂದು ವಿಮೆ ಹಣ ತುಂಬಿಯೂ ಪರಿಹಾರ ಲಭ್ಯವಾಗದ ರೈತರು ಎದುರುನೋಡುತ್ತಿದ್ದಾರೆ.

> ನಾವು ಲಕ್ಷಗಟ್ಟಲೆ ವಿಮಾ ಹಣವನ್ನು ಈ ಕಂಪನಿಗೆ ಕಟ್ಟಿದ್ದೇವೆ. ಆದರೆ ಇವರು ನಮಗೆ ಸಮಯಕ್ಕೆ ಸರಿಯಾಗಿ ಪರಿಹಾರ ನೀಡುತ್ತಿಲ್ಲ. 2022ರ ಬೆಳೆ ಪರಿಹಾರದ ಹಣ ನಮಗಿನ್ನೂ ಸಂದಾಯವಾಗಿಲ್ಲ. ಆದ್ದರಿಂದ ನಮಗೆ ಹಣವನ್ನು ಕೊಡಿಸಿ ಎಂದು ಸಹಾಯಕ ಕೃಷಿ ಅಧಿಕಾರಿ ರವೀಂದ್ರಗೌಡ ಪಾಟೀಲರನ್ನು ನೆರೆದ ರೈತರು ಒಕ್ಕೊರಲಿನಿಂದ ಆಗ್ರಹಿಸಿದರು.

### ಲಕ್ಕಲಕಟ್ಟಿ ಗ್ರಾಮದಲ್ಲಿ ಸೂಡಿ ವಲಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಶಾಸಕ ಜಿ.ಎಸ್ ಪಾಟೀಲ

# ವಿದ್ಯಾರ್ಥಿಗಳು ರಾಷ್ಟ್ರಮಟ್ಟದವರೆಗೆ ಸಾಧನೆ ಮಾಡಲಿ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಗ್ರಾಮೀಣ ಭಾಗದ ಕ್ರೀಡೆಗಳನ್ನು ಸರ್ಕಾರ ಪ್ರೋತ್ಸಾಹಿಸುವುದರೊಂದಿಗೆ ಶೈಕ್ಷಣಿಕ ಪ್ರಗತಿಗೆ ಅಗತ್ಯ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದೆ ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ಸಮೀಪದ ಲಕ್ಕಲಕಟ್ಟಿ ಗ್ರಾಮದಲ್ಲಿ ಗುರುವಾರ ನಡೆದ ಸೂಡಿ ವಲಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಕ್ರೀಡಾ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವುದು ಹಾಗೂ ಗ್ರಾಮೀಣ ಭಾಗದ ಕ್ರೀಡೆಗಳಿಗೆ ಆದ್ಯತೆ ನೀಡುವುದು ಕ್ರೀಡಾಕೂಟದ ಆಶಯವಾಗಿದೆ. ಹೀಗಾಗಿ ಕಾಂಗ್ರೆಸ್ ಸರ್ಕಾರವು ಗ್ರಾಮಗಳ ಅಭಿವೃದ್ಧಿಯೊಂದಿಗೆ ಗ್ರಾಮೀಣ ಭಾಗದ ಶಿಕ್ಷಣದ ಪ್ರಗತಿಗೆ ಹೆಚ್ಚಿನ ಮುತುವರ್ಜಿ ವಹಿಸಿದೆ. ಹೀಗಾಗಿ ಮಕ್ಕಳ ಆಸಕ್ತಿ ಗುರುತಿಸಿ ಅವರಿಗೆ ಸೂಕ್ತ ಪ್ರೋತ್ಸಾಹ ನೀಡಬೇಕಿರುವುದು ಪಾಲಕರ ಹಾಗೂ ಶಿಕ್ಷಕರ ಕರ್ತವ್ಯವಾಗಿದೆ. ವಿದ್ಯಾರ್ಥಿಗಳು ವಲಯ ಮಟ್ಟದಿಂದ ಹಿಡಿದು ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಲಿ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎನ್ ಹುರಳಿ ಮಾತನಾಡಿ, ಗ್ರಾಮೀಣ ಮಟ್ಟದಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ಅಗತ್ಯವಿದೆ.


ಹೀಗಾಗಿ ಶಿಕ್ಷಣ ಇಲಾಖೆಯು ಕ್ರೀಡೆಗಳನ್ನು ಪ್ರೋತ್ಸಾಹಿಸುವುದರ ಜತೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯವು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅಗತ್ಯ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ವಲಯ ಮಟ್ಟದಲ್ಲಿ ಗೆಲವು ಸಾಧಿಸುವ ಕ್ರೀಡಾಪಟುಗಳನ್ನು ತಾಲೂಕು ಮಟ್ಟಕ್ಕೆ ಆಯ್ಕೆ ಮಾಡಲಾಗುವುದು ಎಂದರು.

ಗ್ರಾ.ಪಂ ಅಧ್ಯಕ್ಷ ಮಂಜುನಾಥ ಬೆನಕನವಾರಿ, ಸದಸ್ಯರಾದ ಅಳಬಸಪ್ಪ ಮಾರನಬಸರಿ, ಲಕ್ಷ್ಮಣ ಬೆನಕನವಾರಿ, ಜಿ.ಪಂ ಮಾಜಿ ಸದಸ್ಯೆ ಮಂಜುಳಾ ಹುಲ್ಲಣ್ಣವರ, ಎಸ್‌ಡಿಎಂಸಿ ಅಧ್ಯಕ್ಷೆ ರೇಣುಕಾ ಬೆನಕನವಾರಿ, ಶಾಲೆಯ ಪ್ರಧಾನಗುರು ಎ.ಎಸ್ ರಾಠೋಡ, ವೀರಣ್ಣ ಶೆಟ್ಟರ, ಯೂಸೂಫ್ ಇಟಗಿ, ವಿ.ಬಿ ಸೋಮನಕಟ್ಟಿಮಠ, ಬಿ.ಆರ್ ಬೆನಕನವಾರಿ, ರಾಮಲಿಂಗಪ್ಪ ಬೆನಕವಾರಿ, ಪಿಡಿಒ ಮಂಜುನಾಥ ಪಾಟೀಲ, ಅಕ್ಷರ ದಾಸೋಹದ ಸಹ ನಿರ್ದೇಶಕ ಬಸವರಾಜ ಅಂಗಡಿ, ಗಜೇಂದ್ರಗಡ ಶಿಕ್ಷಕರ ಸಂಘದ ಅಧ್ಯಕ್ಷ ವಿ.ಎ ಹಾದಿಮನಿ, ಸಿಆರ್‌ಪಿ ಆರ್.ಜಿ ಮ್ಯಾಕಲ್ ಮುಂತಾದವರಿದ್ದರು.

> ಲಕ್ಕಲಕಟ್ಟಿ ಗ್ರಾಮದಲ್ಲಿ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಶಾಂತಗೇರಿ, ಮುಶೀಗೇರಿ, ಗುಳಗುಳಿ, ಲಕ್ಕಲಕಟ್ಟಿ, ಸೂಡಿ ಮತ್ತು ಇಟಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗೆಲವು ಸಾಧಿಸಿದ 300 ವಿದ್ಯಾರ್ಥಿಗಳು ವಲಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

## ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ಜಿಲ್ಲಾ ಪ್ರವಾಸ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ



ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ಸೆಪ್ಟೆಂಬರ್ 8 ಹಾಗೂ 9 ರ ಪ್ರವಾಸ ಕಾರ್ಯಕ್ರಮದ ವಿವರ ಇಂತಿದೆ.

ಸೆಪ್ಟೆಂಬರ್ 8 ರಂದು ಬೆಂಗಳೂರಿನಿಂದ ರೈಲಿನ ಮುಖಾಂತರ ಹುಬ್ಬಳ್ಳಿ ಮಾರ್ಗವಾಗಿ ಬೆ 8 ಗಂಟೆಗೆ ಗದುಗಿಗೆ ಆಗಮಿಸುವರು. ಬೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಲಕ್ಕುಂಡಿ ಪ್ರಾಧಿಕಾರದ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬೆ 11.00 ಗಂಟೆಗೆ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಸಭಾಂಗಣದಲ್ಲಿ ಕಮಾಂಡರ್ ಮತ್ತು ಕಂಟ್ರೋಲ್ ಸೆಂಟರ್‌ನ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು. ಬೆ 11.30 ಗಂಟೆಗೆ ಜಿಲ್ಲಾ ಪೊಲೀಸ್ ಇಲಾಖೆಯ ಪರಿಶೀಲನಾ ಸಭೆ ನಡೆಸಿ ವಾಸ್ತವ್ಯ ಮಾಡುವರು.

ಸೆಪ್ಟೆಂಬರ್ 9 ರಂದು ಬೆ 10.30 ಗಂಟೆಗೆ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಅರ್ಬನ್ ಬ್ಯಾಂಕ್ ಆವರಣ ಅಕ್ಕಿ ಆಲೂರಿನಲ್ಲಿ ದಿ ಅಕ್ಕಿಆಲೂರ ಅರ್ಬನ್ ಕೋ- ಆಪರೇಟಿವ ಬ್ಯಾಂಕ್‌ನ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮ. 1 ಗಂಟೆಗೆ ಗದಗಿಗೆ ಆಗಮಿಸಿ ನಗರದ ಶಿವಾನಂದ ಕಲ್ಯಾಣ ಮಂಟಪದಲ್ಲಿ ಡಿ.ಜಿ. ಮೇಲ್ಮಾಳಗಿ ಆಯುರ್ವೇದಿಕ್ ಕಾಲೇಜ್‌ನ ಪ್ರಾಚಾರ್ಯರಾದ ಡಾ.ಪುರದ ಅವರ ನಿವೃತ್ತಿ ಅಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 6.30 ಗಂಟೆಗೆ ನಗರದ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಗದಗ ಜಿಲ್ಲಾ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ವತಿಯಿಂದ ಜರುಗುವ ಗದಗ ಉತ್ಸವ ಕಾರ್ಯಕ್ರಮ ಹಾಗೂ ವಸ್ತು ಪ್ರದರ್ಶನದ ಉದ್ಘಾಟನೆಯಲ್ಲಿ ಭಾಗವಹಿಸುವವರು. ರಾತ್ರಿ 8.30 ಗಂಟೆಗೆ ನಗರದ (ಬುಳ್ಳಾ ಪ್ಲಾಟ್) ಕಾಶಿ ವಿಶ್ವನಾಥ ನಗರದದ ಕಾಶಿ ವಿಶ್ವನಾಥ ರಥೋತ್ಸವ ಹಾಗೂ ಜಗನ್ಮಾತೆ ದುರ್ಗಾದೇವಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ರಾತ್ರಿ 9.40 ಗಂಟೆಗೆ ಹುಬ್ಬಳ್ಳಿಯಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣ ಮಾಡುವರು ಎಂದು ಸಚಿವರ ಕಚೇರಿಯ ಮೂಲಗಳು ಪ್ರಕಟಣೆಯಲ್ಲಿ ತಿಳಿಸಿದೆ.

## ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರ ಜಿಲ್ಲಾ ಪ್ರವಾಸ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಗೃಹ ಸಚಿವರಾದ ಡಾ. ಜಿ.ಪರಮೇಶ್ವರ ಅವರ ಸೆಪ್ಟೆಂಬರ್ 8 ರ ಜಿಲ್ಲಾ ಪ್ರವಾಸ ವಿವರ ಇಂತಿದೆ.

ಸೆಪ್ಟೆಂಬರ್ 8 ರಂದು ಬೆಳಿಗ್ಗೆ ಬೆಂಗಳೂರಿನಿಂದ ಹುಬ್ಬಳ್ಳಿಗೆ ವಿಮಾನ ಮೂಲಕ ಆಗಮಿಸಿ ಅಲ್ಲಿಂದ ರಸ್ತೆ ಮಾರ್ಗವಾಗಿ ಬೆ. 9.30 ಗಂಟೆಗೆ ಗದುಗಿಗೆ ಆಗಮಿಸುವರು. ಬೆ.10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಲಕ್ಕುಂಡಿ ಪ್ರಾಧಿಕಾರದ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬೆ.11 ಗಂಟೆಗೆ ನಗರದ ಎಸ್.ಪಿ. ಕಚೇರಿ ಕಮಾಂಡ್ ಸೆಂಟರ್ ಥರ್ಡ್-ಐ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬೆ.11.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಗರದ ಎಸ್.ಪಿ. ಕಚೇರಿಯಲ್ಲಿ ಗದಗ ಜಿಲ್ಲಾ ಪೊಲೀಸ್ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸುವರು. ನಂತರ ಮಧ್ಯಾಹ್ನ 3 ಗಂಟೆಗೆ ಗದಗಿನಿಂದ ರಸ್ತೆ ಮಾರ್ಗವಾಗಿ ಹುಬ್ಬಳ್ಳಿಗೆ ತೆರಳುವರು. ಅಲ್ಲಿಂದ ವಿಮಾನ ಮೂಲಕ ಬೆಂಗಳೂರಿಗೆ ಪ್ರಯಾಣ ಮಾಡುವರು ಎಂದು ಗೃಹ ಸಚಿವರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಹಂದಿಗಳ ಮಾಲೀಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಹಂದಿಗಳ ಮಾಲೀಕರಿಗೆ ತಿಳಿಯಪಡಿಸುವುದೇನೆದರೆ ವಿವಿಧ ವಾರ್ಡ್‌ಗಳ ಓಣಿಗಳಲ್ಲಿ ಅನಧಿಕೃತವಾಗಿ ಹಂದಿಗಳನ್ನು ಬಿಟ್ಟಿದ್ದು ಹಂದಿಗಳಿಂದ ಪಟ್ಟಣದಲ್ಲಿ ಅನೈರ್ಮಲ್ಯತೆ ಉಂಟಾಗಿರುತ್ತದೆ.

ಇದರಿಂದ ಸಾರ್ವಜನಿಕರಿಗೆ ಮಹಿಳೆಯರಿಗೆ, ಮತ್ತು ಸಣ್ಣ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಉಂಟುಮಾಡುತ್ತಿವೆ. ಸಾರ್ವಜನಿಕರ ಮನೆಗಳ ಮತ್ತು ಅಕ್ಕ-ಪಕ್ಕದಲ್ಲಿ ತುಂಬಾ ಗಲೀಜು ಮಾಡುತ್ತಿವೆ. ಹಂದಿಗಳ ಉಪಟಳದಿಂದ ಸಾರ್ವಜನಿಕರು ಹಂದಿಗಳನ್ನು ಬೇರೆ ಕಡೆ ಸ್ಥಳಾಂತರಿಸುವ ಬಗ್ಗೆ ಲಿಖಿತವಾಗಿ ಪುರಸಭೆಗೆ ದೂರುಗಳು ಸಲ್ಲಿಸುತ್ತಿದ್ದು, ಜನವಸತಿ ಪ್ರದೇಶಗಳಲ್ಲಿ ವಾಸಿಸಲು ಬಿಟ್ಟಿರುವ ▸▸3ನೇ ಪುಟಕ್ಕೆ

### ಕ್ರೆಡಿಟ್ ಆಕ್ಸಿಸ್ ಗ್ರಾಮೀಣ ಲಿ. ಗ್ರಾಮೀಣ ಕೂಟ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

# ಅಚಲವಾದ ನಂಬಿಕೆ, ಪರಿಶ್ರಮಕ್ಕೆ ಆದ್ಯತೆ ನೀಡಿ



■ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳು ಇಂತಹ ಕ್ರೆಡಿಟ್ ಆಕ್ಸಿಸ್ ಗ್ರಾಮೀಣ ಲಿಮಿಟೆಡ್ ಗ್ರಾಮೀಣ ಕೂಟ ಸಂಸ್ಥೆಯಿಂದ ಪ್ರತಿಭಾ ಪುರಸ್ಕಾರ ಪಡೆದು, ವಿದ್ಯಾರ್ಥಿ ಜೀವನದಲ್ಲಿ ಅಚಲವಾದ ನಂಬಿಕೆ, ನಿರಂತರ ಪರಿಶ್ರಮದೊಂದಿಗೆ ಸಾಧನೆ ಮಾಡಿದಾಗ ಇಂತಹ ಸಂಸ್ಥೆಗಳು ಕೊಡಮಾಡಿದ ಪ್ರೋತ್ಸಾಹ ಧನಕ್ಕೆ ಮಹತ್ವ ಕೊಟ್ಟಂತಾಗುತ್ತದೆ ಎಂದು ಗದಗ ಜಿಲ್ಲಾಧಿಕಾರಿ ವೈಶಾಲಿ ಎಮ್.ಎಲ್ ಹೇಳಿದರು.

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಗುರುವಾರ ಬೆಂಗಳೂರ ಮೂಲದ ಕ್ರೆಡಿಟ್ ಆಕ್ಸಿಸ್ ಗ್ರಾಮೀಣ ಲಿಮಿಟೆಡ್ ಗ್ರಾಮೀಣ ಕೂಟ ಸಂಸ್ಥೆಯ ವತಿಯಿಂದ ಗ್ರಾಮೀಣ ಭಾಗದ ಸರಕಾರಿ ಪ್ರೌಡಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದು ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ತಲಾ 15 ಸಾವಿರ ರೂ.ನಗದು ಮತ್ತು ಪ್ರಮಾಣಪತ್ರವನ್ನು ವಿತರಿಸಿ ಮಾತನಾಡಿದರು.

ಗದಗ ಏರಿಯಾ ಮ್ಯಾನೇಜರ್ ತಿಪ್ಪೇಸ್ವಾಮಿ ▸▸3ನೇ ಪುಟಕ್ಕೆ

> ಜಿಲ್ಲಾ ಲೀಡ್ ಬ್ಯಾಂಕ್‌ನ ವ್ಯವಸ್ಥಾಪಕ ಜಬ್ಬರಅಹ್ಮದ ಸಾರವಾಡ, ಕಂಪನಿಯ ಪ್ರಾದೇಶಿಕ ವ್ಯವಸ್ಥಾಪಕ ಮಂಜುನಾಥ ಆಯ್. ಎಮ್ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಉತ್ತಮ ಸಂಸ್ಕಾರ ಹೊಂದುವುದು, ಜೀವನದಲ್ಲಿ ನಿರಂತರ ಶ್ರಮಕ್ಕೆ ಆದ್ಯತೆ ನೀಡಿ, ಗುರಿ ಮುಟ್ಟಿದಾಗ ಮಾತ್ರ ಸಮಾಜದಲ್ಲಿ ಮುಖ್ಯ ವಾಹಿನಿಗೆ ಬಂದು ನಿಲ್ಲಲು ಸಾಧ್ಯ. ಆ ನಿಟ್ಟಿನಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ ಎಂದು ಹೇಳಿದರು.

## ಕೂಡಲಸಂಗಮ ಪಂಚಮಸಾಲಿ ಶ್ರೀಗಳ ಇಷ್ಟಲಿಂಗ ಪೂಜೆಗೆ ಬೆಂಬಲ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗಾಗಿ ಒತ್ತಾಯಿಸಿ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರು ಇಷ್ಟಲಿಂಗ ಪೂಜೆಯ ಮೂಲಕ ಕೈಗೊಂಡ ಹೋರಾಟಕ್ಕೆ ಪಟ್ಟಣದ ಪಂಚಮಸಾಲಿ ಸಮುದಾಯದ ಹಲವರು ಬೆಂಬಲಿಸಿ ಕಿತ್ತೂರು ಚೆನ್ನಮ್ಮ ಸಮುದಾಯ ಭವನ ಜಾಗೆಯಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸಿದರು.

ತಾಲೂಕು ಪಂಚಮಸಾಲಿ ಸಮುದಾಯದ ಮಾಜಿ ಅಧ್ಯಕ್ಷ ಕೊಟ್ರಗೌಡ ಪಾಟೀಲ ಮಾತನಾಡಿ, ಪಂಚಮಸಾಲಿ ಸಮುದಾಯವನ್ನು 2ಎ ಮೀಸಲಾತಿ ಜಾರಿಗೆ ಒತ್ತಾಯಿಸಿ ಕೂಡಲಸಂಗಮ ಪಂಚಮಸಾಲಿ ಶ್ರೀಗಳು ಕೈಗೊಂಡಿರುವ ಇಷ್ಟಲಿಂಗ ಪೂಜೆಗೆ ಬೆಂಬಲಿಸಿದ್ದೇವೆ. ರಾಜ್ಯ ಸರ್ಕಾರವು ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸಲು ಮುಂದಾಗಬೇಕು.

ರಾಜ್ಯ ಸರ್ಕಾರ 2ಎ ಮೀಸಲಾತಿ ಜಾರಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಿಸಿದರು.

ಜಿ.ಪಂ ಮಾಜಿ ಸದಸ್ಯ ಶಿವಪ್ಪ ಅಂಕದ, ದೇವಪ್ಪ ಇಟಗಿ ಮಾತನಾಡಿದರು. ಶಿವಾನಂದ ಕಮತಾರ, ಈರಣ್ಣ ಹಕ್ಕಂಡಿ, ಶಿವಾನಂದ ನವಲಗುಂದ, ಶಿವಬಸಪ್ಪ ಬ್ಯಾಳಿ, ನಾಗರಾಜ ಮುರಡಿ, ಅಂದಪ್ಪ ಮಾರನಬಸರಿ, ಶ್ರೀಕಾಂತಗೌಡ ಪಾಟೀಲ, ಬಸವರಾಜ ಬಣಕಾರ, ರಮೇಶಗೌಡ ಪಾಟೀಲ, ಈರಣ್ಣ ಕಲ್ಲಳ್ಳಿ, ಆರ್.ಕೆ ದೇಸಾಯಿ, ಹುಚ್ಚಪ್ಪ ಇಟಗಿ ಮುಂತಾದವರಿದ್ದರು.



## ಸಾಕ್ಷಿ ಸುಭಾಷಿತ

**ದುಡಿಮೆ ಮಾಡದೆ ಬಾಳುವುದು ನಾಗರಿಕತೆ ಲಕ್ಷಣ ಎಂಬ ತಪ್ಪು ಗ್ರಹಿಕೆ ಜಗತ್ತನ್ನು ಬಿಟ್ಟು ತೊಲಗುವವರೆಗೂ ದುಡಿಮೆಯ ಬೆಲೆ ಅರ್ಥವಾಗುವುದಿಲ್ಲ.**

**–ವಿ. ಕಾಪಟ್**

## ಸಂಪಾದಕೀಯ

# ಆರ್ಥಿಕ ಅಪರಾಧಿಗಳ ಹಸ್ತಾಂತರಕ್ಕೆ ಜಿ 20 ಶೃಂಗಸಭೆ ವೇದಿಕೆ ಆಗಲಿ

ಭಾರತ ಜಿ 20 ಆತಿಥ್ಯ ವಹಿಸಿಕೊಂಡಿದ್ದು, ಅನೇಕ ಪ್ರಮುಖ ವಿಷಯಗಳ ಚರ್ಚೆಗೆ ವೇದಿಕೆಯಾಗುತ್ತಿದೆ. ಆದರೆ ಸದ್ಯ ಭಾರತಕ್ಕೆ ಆರ್ಥಿಕ ಅಪರಾಧಿಗಳ ಹಸ್ತಾಂತರಕ್ಕೂ ಜಿ 20 ವೇದಿಕೆಯಾಗುವ ಸಾಧ್ಯತೆಗಳಿವೆ.

ವಿದೇಶದಲ್ಲಿ ಆಶ್ರಯ ಪಡೆದಿರುವ ದೇಶ ಭ್ರಷ್ಟರು, ಆರ್ಥಿಕ ಅಪರಾಧಿಗಳನ್ನು ಹಸ್ತಾಂತರಿಸುವುದು ಮಾತ್ರವಲ್ಲ, ವಿದೇಶದಲ್ಲಿ ಹೊಂದಿರುವ ಆಸ್ತಿಗಳನ್ನು ಪತ್ತೆಹಚ್ಚಲು ಸಾಮಾನ್ಯ ವೇದಿಕೆಯೊಂದನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಕಾರ್ಯತಂತ್ರವೊಂದನ್ನು ರೂಪಿಸಿ ಜಿ20 ಮುಂದಿಡುವ ಪ್ರಯತ್ನ ನಡೆಸಿದೆ.

ಒಂದೊಮ್ಮೆ ಇದು ಯಶಸ್ವಿಯಾದರೆ ತಲೆಮರೆಸಿಕೊಂಡಿರುವ ವಿಜಯ ಮಲ್ಯ, ನೀರವ್ ಮೋದಿ, ಹಿತೇಶ್ ಕುಮಾರ್ ಸಹಿತ 19 ಜನ ದೇಶ ಭ್ರಷ್ಟರು ಭಾರತಕ್ಕೆ ಮರಳಲಿದ್ದಾರೆ. ಜೊತೆಗೆ ವಿದೇಶದಲ್ಲಿರುವ ಅವರ ಆಸ್ತಿಯೂ ಜಪ್ತಿಯಾಗಿ ಭಾರತೀಯ ಬ್ಯಾಂಕುಗಳು ಮತ್ತೆ ಸದೃಢವಾಗಲಿವೆ.

ಸದ್ಯಕ್ಕೆ ಹಸ್ತಾಂತರ ಒಪ್ಪಂದದ ಲೋಪ ದೋಷಗಳಿಂದಾಗಿ ಈ ಆರ್ಥಿಕ ಅಪರಾಧಿಗಳು ವಿದೇಶದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದಾರೆ. ಇಂತಹ ವಂಚಕರ ಕುರಿತಾಗಿ ದೇಶದಲ್ಲಿ ಬಹುದೊಡ್ಡ ರಾಜಕೀಯ ಚರ್ಚೆ ನಡೆಯುತ್ತಿದೆ. ಆಡಳಿತ ಮತ್ತು ಪ್ರತಿಪಕ್ಷದ ನಡುವಿನ ರಾಜಕೀಯ ಸಮರಕ್ಕೆ ಇಂತಹ ಆರ್ಥಿಕ ಅಪರಾಧಿಗಳು ಕಾರಣರಾಗಿದ್ದಾರೆ.

ಕೇಂದ್ರ ಸರ್ಕಾರವು ವಿದೇಶದಲ್ಲಿ ತಲೆಮರೆಸಿಕೊಂಡಿರುವ ಆರ್ಥಿಕ ಅಪರಾಧಿಗಳನ್ನು ಭಾರತಕ್ಕೆ ಕರೆತರುವ ಬಗ್ಗೆ ಆಗಾಗ ಮಾತನಾಡುತ್ತದೆ. ಆದರೆ ವರ್ಷಗಳಿಂದ ಅದು ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರ ಇಂತಹ ಆರ್ಥಿಕ ಅಪರಾಧಿಗಳ ಪರವಾಗಿದೆ ಎಂದು ಕಾಂಗ್ರೆಸ್ ಟೀಕಿಸುತ್ತಲೇ ಇದೆ. ಆದರೂ ಕೇಂದ್ರ ಸರ್ಕಾರ ಅವರನ್ನು ಮರಳಿ ಕರೆ ತರುವ ಪ್ರಯತ್ನ ಅಷ್ಟು ಗಂಭೀರವಾಗಿ ಮಾಡಿದ್ದಿಲ್ಲ.

ಸದ್ಯ ಜಿ 20 ಶೃಂಗಸಭೆಯ ಮೂಲಕವಾದರೂ ಅಂತವರನ್ನು ಕರೆತರುವ ಪ್ರಯತ್ನ ಮಾಡಿದರೆ ದೇಶಕ್ಕೂ ಒಳಿತು, ಬಿಜೆಪಿಗೂ ಒಳಿತಾಗಲಿದೆ.

## ಶ್ರೀ ವೀರಭದ್ರೇಶ್ವರ ಜಯಂತಿ ಆಚರಣೆ



**■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ತಾಲೂಕಿನ ಮಾಗಡಿ ಗ್ರಾಮದಲ್ಲಿ ಶ್ರಾವಣ ಮಾಸದ ನಿಮಿತ್ತ ಶ್ರೀ ವೀರಭದ್ರೇಶ್ವರ ಜಯಂತಿ, ಹಾನಗಲ್ ಶ್ರೀ ಕುಮಾರೇಶ್ವರ ಜಯಂತಿ ಹಾಗೂ ಶ್ರೀ ಗುರು ಪುಟ್ಟರಾಜ ಗುರುವರ್ಯರ ಜಯಂತ್ಯುತ್ಸವ ನೆರವೇರಿತು.

ಬೃಹತ್ ಭಾವಚಿತ್ರಗಳೊಂದಿಗೆ ಸಕಲ ವಾದ್ಯಗೋಷ್ಠಿ, ಭಜನೆಯ ಮೂಲಕ ಗ್ರಾಮದಲ್ಲಿ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭದಲ್ಲಿ ಶ್ರೀ ವೀರಭದ್ರೇಶ್ವರ ಸೇವಾ ಸಮಿತಿ, ಶ್ರೀ ಬಸವೇಶ್ವರ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ನಡೆಯಿತು. ವೇ.ಮೂ ಫಕ್ಕೀರಯ್ಯ ಹಿರೇಮಠ, ವಿರುಪಾಕ್ಷಪ್ಪ ನವಲಿ, ಅಶೋಕ ಪಲ್ಲೇದ, ವಿ.ಕೆ ಅಂಗಡಿ, ಶಿವರಾಜ್‌ಗೌಡ ಪಾಟೀಲ, ಮಂಜುನಾಥ ಇಟಗಿ ಮುಂತಾದವರು ಉಪಸ್ಥಿತರಿದ್ದರು.

## ಜೈ ಭೀಮ್ ಸಂಘರ್ಷ ಸಮಿತಿಯಿಂದ ಶಿಕ್ಷಕರ ದಿನಾಚರಣೆ



**■ ವಿಜಯಸಾಕ್ಷಿ ಸುದ್ದಿ, ಗದಗ**

ಜೈ ಭೀಮ್ ಸಂಘರ್ಷ ಜಿಲ್ಲಾ ವತಿಯಿಂದ ಅಕ್ಷರದ ಅವ್ವ ಸಾವಿತ್ರಿಬಾಯಿ ಪುಲೆ ಹಾಗೂ ಡಾ. ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಗಣೇಶ್ ಹುಬ್ಬಳ್ಳಿ, ಕರ್ನಾಟಕ ಚಕ್ರವರ್ತಿ ಡಾ.ಶಿವರಾಜಕುಮಾರ ಅಭಿಮಾನಿ ಸಂಘದ ಜಿಲ್ಲಾಧ್ಯಕ್ಷ ವಿಠ್ಠಲ ಪರಾಪುರ ಜೈ ಭೀಮ ಸಂಘರ್ಷ ಸಮಿತಿಯ ಉಪಾಧ್ಯಕ್ಷ ಮಂಜುನಾಥ ಎಫ್.ತೌಜಲ್, ರೋಣ ತಾಲೂಕಾಧ್ಯಕ್ಷ ಬಸವರಾಜ ಬದಾಮಿ, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ರಾಷ್ಟ್ರೀನ್ ಜೋಸೆಫ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಉಪಾಧ್ಯಕ್ಷ ರಾಜೇಶ ವಿ.ಶೆಟ್ಟರ್, ಜೈ ಭೀಮ್ ಸಂಘರ್ಷ ಸಮಿತಿ ಸಹ-ಕಾರ್ಯದರ್ಶಿ ಶಿವಣ್ಣ ಕಡಿವಾಲ, ಹೇಮಂತ ಹುಬ್ಬಳ್ಳಿ, ಯಶವಂತ ಹುಬ್ಬಳ್ಳಿ, ಚಾರು ಹೆಚ್.ರಾಮಗಿರಿ, ಮಡಿವಾಳ ಸಮಾಜದ ಮುಖಂಡರಾದ ಕೃಷ್ಣಪ್ಪ ಮಡಿವಾಳರ ಉಪಸ್ಥಿತರಿದ್ದರು.


## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545


### ಕಬ್ಬಿಣದ ಕಡಲೆಯಂಥ ಯುಪಿಎಸ್‌ಸಿ ಪರೀಕ್ಷೆಯನ್ನು ಜೀರ್ಣಿಸಿಕೊಂಡ ಸಾಧಕರಿವರು

# ಸತತ ಪರಿಶ್ರಮವೇ ಸಾಧನೆಗೆ ಮೆಟ್ಟಿಲು

ಯುಪಿಎಸ್‌ಸಿ ಪರೀಕ್ಷೆಯ ಸಿದ್ಧತೆಯೆಂದರೆ ಒಂದು ತಪಸ್ಸು. ಪ್ರತೀ ವರ್ಷ ದೇಶಾದ್ಯಂತ ಅದೆಷ್ಟೋ ಸಾವಿರ ವಿದ್ಯಾರ್ಥಿಗಳು ಈ ಪರೀಕ್ಷೆಗಾಗಿ ಹಗಲು-ರಾತ್ರಿಗಳನ್ನು ಒಂದುಗೂಡಿಸಿ ತಯಾರಿ ನಡೆಸುತ್ತಾರೆ. ಬೆನ್ನಲ್ಲೇ, ಪ್ರತಿದಿನ ಅನೇಕ ಯುಪಿಎಸ್‌ಸಿ ಯಶಸ್ಸಿನ ಕಥೆಗಳನ್ನು ಓದುತ್ತೇವೆ.

ಯುಪಿಎಸ್ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಪ್ರತಿಯೊಬ್ಬ ಐಎಎಸ್ ಮತ್ತು ಐಪಿಎಸ್ ಅಧಿಕಾರಿ ದಾಟುವ ವಿವಿಧ ಅಡೆತಡೆಗಳ ಬಗ್ಗೆ ನಾವು ಕೇಳುತ್ತಲೇ ಇರುತ್ತೇವೆ. ಅವರ ಸಮರ್ಪಣೆ ಮತ್ತು ಅವರ ಸಾಧನೆ ಮುಂದಿನ ಪೀಳಿಗೆಗೆ ಉದಾಹರಣೆಯಾಗುತ್ತದೆ ಮತ್ತು ಅನೇಕರು ಅವರಿಂದ ಯಶಸ್ಸಿನ ಪ್ರೇರಣೆಯನ್ನೂ ಪಡೆಯುತ್ತಾರೆ. ಹೀಗಿರುವಾಗ, ನಾಗರಿಕ ಸೇವಕರಾಗಿ ತಮ್ಮ ಛಾಪು ಮೂಡಿಸಿದ ಈ ನಾಲ್ಕು ಒಡಹುಟ್ಟಿದವರ ಬಗ್ಗೆ ತಿಳಿಯಲೇಬೇಕು.



ಉತ್ತರ ಪ್ರದೇಶ ಮೂಲದ ಪ್ರತಾಪಗಢದ ಮಿಶ್ರಾ ಕುಟುಂಬದ ನಾಲ್ವರು ಒಡಹುಟ್ಟಿದವರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಐಎಎಸ್-ಐಪಿಎಸ್ ಅಧಿಕಾರಿಗಳಾದರು.

ಐಎಎಸ್ ಅಧಿಕಾರಿಯಾಗಿ ನೇಮಕಗೊಂಡ ಯೋಗೇಶ್ ಮಿಶ್ರಾ 2013ರಲ್ಲಿ ಯುಪಿಎಸ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಕುಟುಂಬದ ಮೊದಲ ವ್ಯಕ್ತಿಯಾಗಿದ್ದರು. 2015ರಲ್ಲಿ, ಅವರ ಸಹೋದರಿ ಮಾಧವಿ ಮಿಶ್ರಾ ಕೂಡ ಅಣ್ಣನ ಹೆಜ್ಜೆಗಳನ್ನೇ ಅನುಸರಿಸಿ ಐಎಎಸ್ ಆದರು. ಹಿರಿಯ ಸಹೋದರಿ ಕ್ಷಮಾ ಮಿಶ್ರಾ 2016ರಲ್ಲಿ 4ನೇ ಪ್ರಯತ್ನದಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಐಪಿಎಸ್ ಅಧಿಕಾರಿಯಾದರು. ಕಿರಿಯ ಸಹೋದರ ಲೋಕೇಶ್ ಮಿಶ್ರಾ ಕೂಡ ಐಎಎಸ್ ಅಧಿಕಾರಿಯಾಗುವ ತಮ್ಮ ಗುರಿಯನ್ನು ಪೂರೈಸಿದ್ದಾರೆ.

ಪ್ರಸ್ತುತ, ಕ್ಷಮಾ ಮಿಶ್ರಾ ಅವರು ಬೆಂಗಳೂರಿನಲ್ಲಿ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಕಮಾಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಐಎಎಸ್ ಅಧಿಕಾರಿ ಯೋಗೇಶ್ ಮಿಶ್ರಾ ಆರ್ಡಿನೆನ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮಾಧವಿ ಮಿಶ್ರಾ ಜಾರ್ಖಂಡ್ ಜಿಲ್ಲೆಯ ರಾಮಗಢದಲ್ಲಿ ಮತ್ತು ಲೋಕೇಶ್ ಮಿಶ್ರಾ ಜಾರ್ಖಂಡ್ ಜಿಲ್ಲೆಯ ಕೊಡೆರ್ಮಾದಲ್ಲಿ ಡಿಸಿಸಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಲೋಕೇಶ್ ಐಐಟಿ ದೆಹಲಿಯಿಂದ ಇಂಜಿನಿಯರಿಂಗ್ ಪದವಿ ಪಡೆದವರು. ಯೋಗೇಶ್ ಅವರಂತೆಯೇ, ಅವರು ಸಮಾಜಶಾಸ್ತ್ರವನ್ನು ಐಚ್ಛಿಕವಾಗಿ ಪೂರ್ಣಗೊಳಿಸಿದರು. ನಾಲ್ವರು ಒಡಹುಟ್ಟಿದವರಲ್ಲಿ ಕಿರಿಯರಾದ ಕ್ಷಮಾ ಮಿಶ್ರಾ 2015ರಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಅವರು 172 ಎಐಆರ್ ಪಡೆದು ಐಪಿಎಸ್ ಸೇರಿದರು.

ಈ ನಾಲ್ವರು ಒಡಹುಟ್ಟಿದವರು ಮೂರು ವರ್ಷಗಳ ಅವಧಿಯಲ್ಲಿ ಐಎಎಸ್-ಐಪಿಎಸ್ ಅಧಿಕಾರಿಗಳಾಗಿ ಸಾಧನೆ ಮೆರೆದಿದ್ದಾರೆ.

**–ಅಲೆಮಾರಿ.**

> ಈ ನಾಲ್ವರು ಒಡಹುಟ್ಟಿದವರು ತಮ್ಮ ಸಾಧನೆಯಿಂದ ಇತರರಿಗೆ ಉದಾಹರಣೆಯಾಗಿ ನಿಲ್ಲುತ್ತಾರೆ. ಇದು ಅವರ ಕಠಿಣ ಪರಿಶ್ರಮದ ಫಲಿತಾಂಶವಾಗಿದೆ ಎಂದು ತಂದೆ ಅನಿಲ್ ಮಿಶ್ರಾ ಹೆಮ್ಮೆ ವ್ಯಕ್ತಪಡಿಸುತ್ತಾರೆ. 'ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ, ಜ್ಞಾನದಂತೆ ಸಂಪನ್ಮೂಲಗಳು ಹೇರಳವಾಗಿ ಲಭ್ಯವಿದೆ. ಆದಾಗ್ಯೂ, ಯುಪಿಎಸ್ಸಿ ತೇರ್ಗಡೆಯಾಗಲು ವೈಯಕ್ತಿಕ ಮಾರ್ಗದರ್ಶನ ಬಹಳ ಮುಖ್ಯ. ಪಠ್ಯಕ್ರಮವನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಮಹತ್ವದ್ದಾಗಿದೆ. ಸಮಯದ ಕೊರತೆಯ ನಡುವೆಯೂ ನಾವು ಕೆಲವು ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದೇವೆ. ಹೆಚ್ಚಿನ ಜನರಿಗೆ ಸಹಾಯ ಮಾಡಲು, ನಾವು ಗ್ಲೋರಿ ಐಎಎಸ್ ಎಂಬ ಯೂಟ್ಯೂಬ್ ಚಾನೆಲ್‌ನ್ನು ಪ್ರಾರಂಭಿಸಿದ್ದೇವೆ. ಕಳೆದ 7-8 ವರ್ಷಗಳಲ್ಲಿ 100ಕ್ಕೂ ಹೆಚ್ಚು ಆಸಕ್ತರು ಯುಪಿಎಸ್ಸಿ ಪರೀಕ್ಷೆಗಳನ್ನು ತೇರ್ಗಡೆಯಾಗಲು ಸಹಾಯ ಮಾಡಿದ್ದೇನೆ' ಎಂದು ಯೋಗೇಶ್ ಹೇಳುತ್ತಾರೆ.

## ಹೆತ್ತ ತಾಯಿ, ಕಲಿಸಿದ ಗುರುಗಳನ್ನು ಮರೆಯಬೇಡಿ

**■ ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಹೆತ್ತ ತಾಯಿ ಮತ್ತು ವಿದ್ಯೆ ಕಲಿಸಿದ ಗುರುಗಳನ್ನು ಎಂದಿಗೂ ಮರೆಯಬೇಡಿ ಎಂದು ಶಿಕ್ಷಕಿ ಎಸ್.ಡಿ ಪಂಡಿತ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹೆತ್ತ ತಾಯಿ ಮೊದಲ ಗುರುವಾಗಿ ಸಂಸ್ಕಾರ ನೀಡಿದರೆ, ವಿದ್ಯೆ ಕಲಿಸಿದ ಗುರುಗಳು ಜ್ಞಾನದ ಬೆಳಕು ನೀಡಿ ಮಕ್ಕಳನ್ನು ತಿದ್ದಿ, ಬುದ್ಧಿ ಹೇಳಿ ಉನ್ನತ ಸ್ಥಾನಕ್ಕೆ ಏರಲು ಶ್ರಮಿಸುತ್ತಾರೆ. ಇವರು ನಮ್ಮ ಎರಡು ಕಣ್ಣುಗಳಿದ್ದಂತೆ. ಪ್ರಾಥಮಿಕ ಹಂತದಲ್ಲಿ ಶಿಕ್ಷಕಿಯಾಗಿ ಸೇವೆ ನೀಡುವುದೇ ಒಂದು ಭಾಗ್ಯ. ಈ ಹಂತದಲ್ಲಿ ಮಕ್ಕಳು ಗಮನವಿಟ್ಟು ವಿದ್ಯೆ ಕಲಿಯಬೇಕು ಎಂದರು.



ಶಿಕ್ಷಕಿ ವಿ.ಎಂ ಕಂಠಿ ಮಾತನಾಡಿ, ಪ್ರಾಥಮಿಕ ಹಂತದಲ್ಲಿ ಮಕ್ಕಳು ಶಿಕ್ಷಕರು ಹೇಳುವ ಪಾಠಗಳನ್ನು ಗಮನವಿಟ್ಟು ಆಲಿಸಬೇಕು. ಮಕ್ಕಳು ಶ್ರದ್ಧೆಯಿಂದ ಕಲಿತಲ್ಲಿ ಪ್ರೌಢ ಹಂತ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆಗೈಯಲು ಸಹಕಾರಿಯಾಗುತ್ತದೆ. ಎಲ್ಲದಕ್ಕೂ ಕಠಿಣ ಪರಿಶ್ರಮ ಬೇಕು ಎಂದರು.

ಅಧ್ಯಕ್ಷತೆಯನ್ನು ಶಾಲಾ ಪ್ರಧಾನ ಗುರು ಪಿ.ಬಿ ಕೆಂಚನಗೌಡರ ವಹಿಸಿದ್ದರು. ಕೆ.ಎಂ ಹೆರಕಲ್ಲ, ಎಂ.ಎಂ ಕೊಪ್ಪಳ, ಎಚ್.ಆರ್ ಭಜಂತ್ರಿ, ಎಸ್.ಎಚ್ ಉಪ್ಪಾರ, ವಿ.ಎಂ ಕಂಠಿ, ಎಸ್.ವಿ ಹಿರೇಮಠ, ಎಸ್.ಡಿ ಪಂಡಿತ, ನಂದಾ ಮಟ್ಟಿ, ಜ್ಯೋತಿ ಜಾಧಾವ, ಶಭಾನಾ ಡಾಲಾಯತ, ಪವಿತ್ರಾ ಮಟ್ಟಿ ಉಪಸ್ಥಿತರಿದ್ದರು. ತೋಸಿನಾ ಖವಾಸ ಸ್ವಾಗತಿಸಿದರು. ಕುಸುಮಾ ಬಗಾಡೆ ಕಾರ್ಯಕ್ರಮ ನಿರೂಪಿಸಿದರು. ಶ್ರೀಧರ ಕರಿಗಾರ ವಂದಿಸಿದರು. ಎಸ್‌ಡಿಎಂಸಿ ಉಪಾಧ್ಯಕ್ಷ ರೇಷ್ಮಾಬಾನು, ನದ್ದಿಮುಲ್ಲಾ, ಸದಸ್ಯ ಫಿರ್ದೋಷಬಾನು ಸಿದ್ದಿ ಇದ್ದರು.

## ಕರಾಟೆಯಿಂದ ಆತ್ಮರಕ್ಷಣೆ ಸಾಧ್ಯ: ಎಂ.ಎಂ ಹವಳದ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಆತ್ಮ ರಕ್ಷಣೆಗಾಗಿ ಮತ್ತು ಎದುರಾಳಿಯನ್ನು ಸಮರ್ಥವಾಗಿ ಎದುರಿಸಲು ಕರಾಟೆ ಕೌಶಲ್ಯ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ ಎಂದು ದೈಹಿಕ ಶಿಕ್ಷಣ ಪರಿವೀಕ್ಷಕ ಎಂ.ಎಂ ಹವಳದ ಹೇಳಿದರು.

ಅವರು ಪಟ್ಟಣದ ಬಿಸಿಎನ್ ಪಾಲಿಟೆಕ್ನಿಕ್ ಕಾಲೇಜು ಆವಣದಲ್ಲಿ ಶಿರಹಟ್ಟಿ ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢ ವಿಭಾಗದ ಕರಾಟೆ ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಸತತ ಅಭ್ಯಾಸದ ಮೂಲಕ ಕರಾಟೆಯ ಎಲ್ಲ ಪಟ್ಟುಗಳನ್ನು ಸರಿಯಾಗಿ ಕಲಿತುಕೊಂಡಲ್ಲಿ ಹೆಚ್ಚು ಪ್ರಯೋಜನಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಪಾಲಕರು ತಮ್ಮ ಮಕ್ಕಳನ್ನು ಕರಾಟೆಯಲ್ಲಿ ಆಸಕ್ತಿ ವಹಿಸುವಂತೆ ಮಾಡುವದು ಅವಶ್ಯವಾಗಿದೆ ಎಂದರು.



ಶಿಕ್ಷಣ ಇಲಾಖೆಯ ಬಿಆರ್‌ಪಿ ಈಶ್ವರ ಮೆಡ್ಲೇರಿ ಮಾತನಾಡಿ, ಪ್ರತಿಯೊಂದು ಕ್ರೀಡೆಯೂ ತನ್ನದೇ ಆದ ವಿಶೇಷತೆಗಳನ್ನು ಹೊಂದಿದ್ದು, ಸ್ವಯಂ ರಕ್ಷಣೆಗಾಗಿ ಇರುವ ಕರಾಟೆ ಕ್ರೀಡೆಯನ್ನು ಇತ್ತೀಚಿನ ದಿನಗಳಲ್ಲಿ ಜನರು ಹೆಚ್ಚು ಇಷ್ಟಪಡುತ್ತಿದ್ದಾರೆ. ಈ ಕ್ರೀಡೆಯಲ್ಲಿ ಭಾಗವಹಿಸಿದ ಮಕ್ಕಳು ಸ್ಪರ್ಧಾಮನೋಭಾವದಿಂದ ಆಟವಾಡಿ ಮುಂದೆ ಜಿಲ್ಲಾ, ರಾಜ್ಯಮಟ್ಟಕ್ಕೆ ಆಯ್ಕೆಯಾಗುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಡವಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯ ಎನ್‌ಸಿಕೆ ಪಾಟೀಲ್, ಕರಾಟೆ ಕೋಚ್ ಸೈಯದ್ ಫಿರ್ಜಾದೆ, ಸಲೀಂ ಪಟವೆಗಾರ್, ಇಮ್ರಾನ್, ಜಯಲಕ್ಷ್ಮೀ ಗುಡಗೇರಿ, ಬಿ.ಎ ಚೌರಿ, ವಿ.ಎ ಪಾಟೀಲ, ದೈಹಿಕ ಶಿಕ್ಷಕರು, ಪಾಲಕರು ಭಾಗವಹಿಸಿದ್ದರು. ಸತೀಶ್ ಬೋಮಲೆ ನಿರ್ವಹಿಸಿದರು. ಆರ್.ಎಮ್ ಕದಡಿ ವಂದಿಸಿದರು.

## ಕೃಷ್ಣನ ಸಂದೇಶವು ಅನುಷ್ಠಾನ ಯೋಗ್ಯವಾಗಿದೆ

**■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ನಿರಂತರ ದೇವರ ನಾಮಸ್ಮರಣೆಯಿಂದ ಸಾಧನೆಯ ಸನ್ಮಾರ್ಗ ಪಡೆಯಲು ಸಾಧ್ಯವಿದೆ ಎಂದು ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ ಹೇಳಿದರು.

ಕೃಷ್ಣ ಜನ್ಮಾಷ್ಟಮಿ ಹಿನ್ನೆಲೆಯಲ್ಲಿ ಪಟ್ಟಣದ ಪುರಸಭೆ ಸಭಾ ಭವನದಲ್ಲಿ ಬುಧವಾರ ಯಾದವ ಸಮಾಜ ಹಾಗೂ ಪುರಸಭೆಯಿಂದ ನಡೆದ ಕೃಷ್ಣ ಜನ್ಮಾಷ್ಟಮಿ ನಿಮಿತ್ತ ಕೃಷ್ಣನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಕೃಷ್ಣನ ಸಂದೇಶವು ಕಲಿಯುದಲ್ಲಿ ಅನುಷ್ಠಾನ ಯೋಗ್ಯವಾಗಿದೆ. ಯುವ ಸಮೂಹ ಲೌಕಿಕ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಆಕರ್ಷಿತರಾಗುತ್ತಿದ್ದಾರೆ. ಲೌಕಿಕ ಜೀವನದಿಂದ ನೆಮ್ಮದಿ, ಶಾಂತಿ ಲಭಿಸುವದಿಲ್ಲ. ದೇವರ ನಾಮಸ್ಮರಣೆಯಿಂದ ಮಾತ್ರ ನೆಮ್ಮದಿ, ಶಾಂತಿ ಸಿಗಲಿದೆ ಎಂದರು.



ಸಮಾಜದ ಮುಖಂಡ ಯಮನಪ್ಪಗೌಡ ಗೌಡರ ಮಾತನಾಡಿ, ಕೃಷ್ಣ ದೇವರು ಎಲ್ಲರಿಗೂ ಹತ್ತಿರವಾದ ದೇವರು. ಸುಖವನ್ನು ನಾವೆಲ್ಲರೂ ಬಯಸುತ್ತೇವೆ. ಆದರೆ ಸುಖಕ್ಕೆ ಬೇಕಾದ ಶಾಶ್ವತ ಮಾರ್ಗವನ್ನು ಮರೆತುಬಿಡುತ್ತೇವೆ.

ಕೃಷ್ಣನ ನಾಮಸ್ಮರಣೆಯನ್ನು ಬಾಲ್ಯ, ಯೌವ್ವನ ಹಾಗೂ ವೃದ್ಧಾಪ್ಯದಲ್ಲೂ ಮಾಡಬೇಕು. ಅಂದಾಗಲೇ ಸುಖ, ಸಂತೋಷ ಜತೆಗೆ ಸಾಧನೆ ಸಾಧ್ಯ ಎಂದರು.

ಸಮಾಜದ ಅಧ್ಯಕ್ಷ ಪರಶುರಾಮಗೌಡ ಗೌಡರ, ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಪುರಸಭೆ ಸದಸ್ಯರಾದ ಸುಭಾಸ ಮ್ಯಾಗೇರಿ, ಮುದಿಯಪ್ಪ ಮುಧೋಳ, ಯು.ಆರ್ ಚನ್ನಮ್ಮನವರ, ಮೂಕಪ್ಪ ನಿಡಗುಂದಿ ಹಾಗೂ ಸಿದ್ದಣ್ಣ ಚೋಳಿನ, ರವಿ ಶಿಂಗ್ರಿ, ಪರಶುರಾಮ ಮ್ಯಾಗೇರಿ, ಹನಮಂತಪ್ಪ ಬೋನೇರಿ, ಪರಶುರಾಮ ವರಗಾ, ಬಾಳನಗೌಡ ಗೌಡರ, ರವಿಕುಮಾರ ದಿವಾಣದ, ಶರಣಪ್ಪ ದಿವಾಣದ, ಮಲ್ಲನಗೌಡ ಗೌಡರ, ಮುತ್ತಪ್ಪ ಕಟಗಿಲರ, ಪರಶುರಾಮ ದಿವಾಣದ, ರಾಘವೇಂದ್ರ ಮಂತಾ, ಜಿ.ಎನ್ ಕಾಳೆ ಮುಂತಾದವರಿದ್ದರು.

## ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಕಳಸಾರೋಹಣ

**■ ವಿಜಯಸಾಕ್ಷಿ ಸುದ್ದಿ, ಗದಗ**

ಕಳಸವು ಭಕ್ತ ಮತ್ತು ಭಗವಂತನ ನಡುವೆ ಸಂಪರ್ಕ ಕಲ್ಪಿಸುವ ಸಾಧನವಾಗಿದೆ. ಭಕ್ತನು ದೇವರಿಂದ ಆಶೀರ್ವಾದ ಪಡೆಯಲು ಭಕ್ತಿ ಮಾರ್ಗದಲ್ಲಿ ನಡೆದಾಗ ಸಾಧ್ಯ ಎಂದು ಪರಮಪೂಜ್ಯ ಶ್ರೀ ಷ. ಬ್ರ. ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಗಳು ನುಡಿದರು.

ಉಸಗಿನಕಟ್ಟಿ ಓಣಿಯುಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಕಳಸಾರೋಹಣವನ್ನು ನೆರವೇರಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಶ್ರೀ ಮ.ನಿ.ಪ್ರ. ಡಾ. ಕೊಟ್ಟೂರೇಶ್ವರ ಮಹಾಸ್ವಾಮಿಗಳು ಮಾತನಾಡಿ, ಶ್ರಾವಣ ಮಾಸದಲ್ಲಿ ನಡೆಯುವ ಇಂಥಹ ಧಾರ್ಮಿಕ ಕಾರ್ಯಕ್ರಮಗಳು ಸಂಸಾರದ ಭವ ಬಂಧನದಿಂದ ಸನ್ಮಾರ್ಗದಲ್ಲಿ ನಡೆದು, ಮುಕ್ತಿ ಹೊಂದಲು ಸಾಧ್ಯ ಎಂದು ತಿಳಿಸಿದರು.



ಆಧ್ಯಾತ್ಮ ವಿದ್ಯಾಶ್ರಮ ಗದಗದ ಶ್ರೀ ಶಿವಶರಣೆ ಮೈತ್ರಾದೇವಿಯವರು ಕಳಸಾರೋಹಣದ ನಿಮಿತ್ತ ಆಧ್ಯಾತ್ಮಿಕ ಪ್ರವಚನವನ್ನು ನೀಡಿದರು. ದೇವಸ್ಥಾನಕ್ಕೆ ಸೇವೆ ಸಲ್ಲಿಸಿದ ಭಕ್ತರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯ ಇಮ್ತಿಯಾಜ್ ಶಿರಹಟ್ಟಿ, ಚಂದ್ರಶೇಖರ ಕರಿಸೋಮನಗೌಡ್ರ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಓಣಿಯ ಹಿರಿಯರಾದ ಈರಪ್ಪ ಜಂಗಣ್ಣವರ, ಚಂದ್ರಶೇಖರ ಮುಳ್ಳಾಳ, ಮಲ್ಲೇಶಪ್ಪ ಉಪ್ಪಸಣ್ಣವರ,. ಕಲ್ಯಾಣಪ್ಪ ಹೋಳಿ, ಮನೋಹರ ಹಳ್ಳಿಕೇರಿ, ನಾಗಪ್ಪ ಮಾರನಬಸರಿ, ಸಂತೋಷ ಖಾನಾಪೂರ, ಮಲ್ಲಪ್ಪ ಪಲ್ಲೇದ, ನಿಂಗಪ್ಪ ಅಣ್ಣಿಗೇರಿ, ಮಂಜು ಪಲ್ಲೇದ, ನೀಲಪ್ಪ ಪಲ್ಲೇದ, ಅಶೋಕ ಮಾನೇದ ಮುಂತಾದವರು ಉಪಸ್ಥಿತರಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಆನಂದ ಹೊಸಮನಿ (ಗುರುಸ್ವಾಮಿ) ವಹಿಸಿದ್ದರು. ಮಲಕಾಜಪ್ಪ ಹೋಳಿ ಸ್ವಾಗತಿಸಿದರು.

ಬೂದಪ್ಪ ಮಾನೇದ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿ.ಎಂ ಮಾರನಬಸರಿ ಗುರುಗಳು ಕಾರ್ಯಕ್ರಮ ನಿರೂಪಿಸಿದರು.

## ಗಂಜಿಗಟ್ಟಿ ಶ್ರೀಗಳ ತುಲಾಭಾರ ಕಾರ್ಯಕ್ರಮ ಸೆ.10ಕ್ಕೆ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಇತ್ತೀಚೆಗೆ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾದ ಗಂಜಿಗಟ್ಟಿಯ ಡಾ.ವೈಜಿನಾಥ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ತುಲಾಭಾರ ಹಾಗೂ ಹರ ಗುರು ಚರಮೂರ್ತಿಗಳಿಗೆ ಸನ್ಮಾನ ಕಾರ್ಯಕ್ರಮವು ಇಲ್ಲಿನ ರಾಮಗಿರಿ ಗ್ರಾಮದೇವತೆ ದೇವಸ್ಥಾನದ ಆವರಣದಲ್ಲಿ ಸೆ.10ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ ಎಂದು ಸದ್ಭಕ್ತ ಮಂಡಳಿ ತಿಳಿಸಿದೆ.

ಅಂದು ನಡೆಯಲಿರುವ ಕಾರ್ಯಕ್ರಮದ ಸಾನ್ನಿಧ್ಯವನ್ನು ನೊಣವಿನಕೆರೆ ಕಾಡಸಿದ್ದೇಶ್ವರಮಠದ ಮನಿಪ್ರ ಡಾ.ಕರಿವೃಷಭದೇಶಿಕೇಂದ್ರ ಶಿವಯೋಗಿಶ್ವರ ಮಹಾಸ್ವಾಮಿಗಳು ವಹಿಸಲಿದ್ದು, ಅಧ್ಯಕ್ಷತೆಯನ್ನು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರಾದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಲಿದ್ದಾರೆ.



ಕಾರ್ಯಕ್ರಮದಲ್ಲಿ ಹೂವಿನಶಿಗ್ಲಿ ವಿರಕ್ತಮಠದ ಶ್ರೀ ಚನ್ನವೀರ ಮಹಾಸ್ವಾಮಿಗಳು, ಬೆಳ್ಳಟ್ಟಿ ರಾಮಲಿಂಗೇಶ್ವರಮಠದ ಶ್ರೀ ಬಸವರಾಜ ಮಹಾಸ್ವಾಮಿಗಳು, ಮಸ್ಕೂರಿನ ಶ್ರೀ ರುದ್ರಮುನಿ ಶಿವಚಾರ್ಯರು, ಮೈಸೂರು, ಬನ್ನಿಕೊಪ್ಪ ಜಪದಕಟ್ಟಿಮಠದ ಶ್ರೀ ಸುಜ್ಞಾನದೇವ ಶಿವಾಚಾರ್ಯ ಮಹಾಸ್ವಾಮಿಗಳು ಉಪಸ್ಥಿತಿ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಸೇರಿದಂತೆ ಅನೇಕ ಗಣ್ಯರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## 2 ತಿಂಗಳಲ್ಲಿ 3,200ಕ್ಕೂ ಹೆಚ್ಚು ಡೆಂಗ್ಯೂ ಪ್ರಕರಣ ವರದಿ; 7 ಮಂದಿ ಸಾವು

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಕಳೆದ ಎರಡು ತಿಂಗಳಲ್ಲಿ ಬೆಂಗಳೂರಿನಲ್ಲಿ 3,200 ಕ್ಕೂ ಹೆಚ್ಚು ಡೆಂಗ್ಯೂ ಪ್ರಕರಣಗಳು ವರದಿಯಾಗಿವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಗುರುವಾರ ಹೇಳಿದ್ದಾರೆ.

ಡೆಂಗ್ಯೂ ಪ್ರಕರಣಗಳ ನಿಯಂತ್ರಣ ಕುರಿತು ಬಿಬಿಪಿಎಂ ಅಧಿಕಾರಿಗಳ ಜೊತೆ ಸಭೆ ನಡೆಸಿದ ಆರೋಗ್ಯ ಸಚಿವರು, ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು ಟೆಸ್ಟಿಂಗ್ ಸ್ಯಾಂಪಲ್ಸ್ ಹೆಚ್ಚಿಸುವಂತೆ ಸೂಚಿಸಿದ್ದಾರೆ.

ಕಳೆದ ಎರಡು ತಿಂಗಳಲ್ಲಿ ಬೆಂಗಳೂರಲ್ಲಿ ಡೆಂಗ್ಯೂ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಾ ಹೋಗಿದೆ. ಸಿಲಿಕಾನ್ ಸಿಟಿಯಲ್ಲಿ ಶಂಕಿತ ಡೆಂಗ್ಯೂನಿಂದ ಏಳು ಮಂದಿ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಸಚಿವರು ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಜಧಾನಿ ಬೆಂಗಳೂರಿನಲ್ಲಿ ಜುಲೈ ಮತ್ತು ಆಗಸ್ಟ್‌ನಲ್ಲಿ ಕ್ರಮವಾಗಿ 1,649 ಮತ್ತು 1,590 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿವೆ. ಸೆಪ್ಟೆಂಬರ್‌ನಲ್ಲಿ ಇದುವರೆಗೆ 416 ಪ್ರಕರಣಗಳು ವರದಿಯಾಗಿವೆ ಎಂದು ಸಚಿವರು ತಿಳಿಸಿದ್ದಾರೆ.

ಮಳೆ ನೀರು ನಿಂತಿರುವುದರಿಂದ ಪ್ರಕರಣಗಳು ಹೆಚ್ಚುತ್ತಿವೆ. ವೈರಸ್ ಹರಡುವ ಸೊಳ್ಳೆಗಳನ್ನು ಹೋಗಲಾಡಿಸಲು ಬೆಂಗಳೂರಿನಲ್ಲಿ ಕೀಟನಾಶಕಗಳನ್ನು ಸಿಂಪಡಿಸಲಾಗುತ್ತಿದೆ ಎಂದು ದಿನೇಶ್ ಗುಂಡೂರಾವ್ ಅವರು ಹೇಳಿದ್ದಾರೆ.

ಈ ತಿಂಗಳು ಹೆಚ್ಚು ಪ್ರಕರಣಗಳು ವರದಿಯಾಗಿವೆ. ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಸಚಿವರು ತಿಳಿಸಿದರು.


### ಪುರಸಭೆ ಕಾರ್ಯಾಲಯ, ಮುಂಡರಗಿ, ಮುಂಡರಗಿ.

ಸಂಖ್ಯೆ: ಪುಸಮುಂ/ಟ್ರೇಡ್ ಲೈಸೆನ್ಸ್/2023-24 ದಿನಾಂಕ: 6-9-2023

**ಜಾಹೀರ ನೋಟೀಸು.**

ಡೇಂಜರ್ ಮತ್ತು ಅಫೆನ್ಸಿವ್ ಟ್ರೇಡ ಲೈಸೆನ್ಸ್ ಬಾಯಲಾ ನಂ. 4 ಪ್ರಕಾರ ಈ ಮೂಲಕ ತಿಳಿಸುವುದೇನೆಂದರೆ, ಮುಂಡರಗಿ ಪುರಸಭೆ ಹದ್ದಿಯಲ್ಲಿ ಈ ಕೆಳಗೆ ಕಾಣಿಸಿದ ಜನರು ಅವರ ಹೆಸರಿನ ಮುಂದೆ ನಮೂದ ಮಾಡಿದ ಜಾಗೆಯಲ್ಲಿ ಲಕ್ಕುಂಡಿ ವೆಲ್ಡಿಂಗ್ ವರ್ಕ್ಸ ಶಾಫ್ ಸ್ಥಾಪಿಸಲು ಲೈಸೆನ್ಸಗೆ ಅರ್ಜಿ ಕೊಟ್ಟಿರುತ್ತಾರೆ.

| ಅನಂ | ಅರ್ಜಿದಾರರ ಹೆಸರು ಮತ್ತು ವಿಳಾಸ. | ಜಾಗೆಯ ವಿವರ ಮತ್ತು ಟಿ.ಎಂ.ಸಿ./ ರಿ.ಸ.ನಂ | ಉದ್ದಿಮೆ ದಂದೆಯ ಹೆಸರು/ ವಿವರ |
|---|---|---|---|
| 1 | ಶ್ರೀ ಸಿರಾಜ ಲಕ್ಕುಂಡಿ ಸಾ: ಬ್ಯಾಲವಡಗಿ | ವಾರ್ಡ ನಂ. 22 ಬ್ಯಾಲವಾಡಗಿ ಆಸ್ತಿ ನಂ. 30: 4496/1 | ಲಕ್ಕುಂಡಿ ವೆಲ್ಡಿಂಗ್ ವರ್ಕ್ಸ ಶಾಫ್ |

ಸದ ಅರ್ಜಿದಾರರು ಮೇಲೆ ನಮೂದ ಮಾಡಿದ (ಉದ್ದಿಮೆ) ದಂದೆ ಮಾಡಲಿಕ್ಕೆ ಆಸ್ತಿ ನಂ. 4496/1 ಜಾಗೆಯನ್ನು ಉಪಯೋಗಿಸುವ ಸಲುವಾಗಿ ಪರವಾನಿಗೆ ನೀಡಲು ಯಾರದಾದರೂ ತಕರಾರು ಇದ್ದಲ್ಲಿ ಈ ನೋಟೀಸು ಪ್ರಸಿದ್ದಿಸಿದ ತಾರೀಖಿನಿಂದ ಏಳು ದಿವಸಗಳ ಒಳಗಾಗಿ ಪುರಸಭೆಗೆ ಲಿಖಿತ ಮೂಲಕ ತಿಳಿಸಬೇಕು. ಈ ಅವಧಿಯೊಳಗೆ ತಕರಾರು ಬಾರದಿದ್ದಲ್ಲಿ ಮಂಜೂರ ವ. ನಾ ಮಂಜೂರ ಮಾಡುವ ಹಕ್ಕು ಪುರಸಭೆಗೆ ಇರುವುದು. ಅವಧಿ ಮೀರಿ ಬಂದ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲಾ.

ಸಹಿ ಆಗಿದೆ/-
**ಮುಖ್ಯಾಧಿಕಾರಿ,**
ಪುರಸಭೆ ಮುಂಡರಗಿ

# ಅಚಲವಾದ ನಂಬಿಕೆ, ಪರಿಶ್ರಮಕ್ಕೆ ಆದ್ಯತೆ ನೀಡಿ

▶▶ ಮೊದಲನೇ ಪುಟದಿಂದ

ನಾಯಕ ಎಸ್ ಮಾತನಾಡಿ, ಕರ್ನಾಟಕ ರಾಜ್ಯಾದ್ಯಂತ 1560 ಗ್ರಾಮೀಣ ಭಾಗದ ಸರಕಾರಿ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದು ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ 15 ಸಾವಿರ ರೂ. ನಗದು ಮತ್ತು ಪ್ರಮಾಣಪತ್ರವನ್ನು ವಿತರಿಸಿದ ಸಂಸ್ಥೆ ನಮ್ಮದಾಗಿದೆ ಎಂದು ಹೇಳಿದರು.

ಬ್ರ್ಯಾಂಚ್ ಮ್ಯಾನೇಜರ್ ಬಸಪ್ಪ ಕೆ.ಸ್ವಾದಿ, ಹೊಸಪೇಟೆ ರೀಜನಲ್ ಆಡಿಟರ್ ಸಂಗನಬಸವಯ್ಯ ಜಿ.ಎಚ್, ಸಿಬ್ಬಂದಿ ವರ್ಗದವರು ಇದ್ದರು.

# ಹಂದಿಗಳ ಮಾಲೀಕರ ಗಮನಕ್ಕೆ

▶▶ ಮೊದಲನೇ ಪುಟದಿಂದ

ನಿಮ್ಮ ಹಂದಿಗಳು ಅನೈರ್ಮಲ್ಯ ಮಾಡಿ ರೋಗಗಳು ಹರಡುವುದರಿಂದಾಗಿ ಸಾರ್ವಜನಿಕರ ಆರೋಗ್ಯದ ಹಿತ ದೃಷ್ಠಿಯಿಂದ ಆ ಹಂದಿಗಳನ್ನು ಸೆರೆಹಿಡಿದು ಪಟ್ಟಣದ ಹೊರವಲಯದಲ್ಲಿ ಸಾಗಾಣಿಕೆ ಮಾಡಲು ಸೂಚಿಸಿದೆ. ತಪ್ಪಿದ್ದಲ್ಲಿ ಪುರಸಭೆ ಅಧಿನಿಯಮದ ಅನ್ವಯ ಸೂಕ್ತ ಕ್ರಮ ವಹಿಸಲಾಗುವದು ಎಂದು ಮುಂಡರಗಿ ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ .

# ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಕೃಷಿ ಇಲಾಖೆಯ ಕೃಷಿ ಯಂತ್ರಧಾರೆ ಯೋಜನೆಯಡಿ ರೈತರಿಗೆ ಸಕಾಲದಲ್ಲಿ ಮತ್ತು ಕಡಿಮೆ ದರದಲ್ಲಿ ಕೃಷಿ ಉಪಕರಣಗಳನ್ನು ಒದಗಿಸಲು ಈಗಾಗಲೇ ಎಝಟಿ ಋಜಜಡಿಜ ಅಂಟಡಿಚಿಟಥಿ ಇವರು 6 ವರ್ಷ ಕೃಷಿ ಉಪಕರಣಗಳು ಸೇವಾ ಕೇಂದ್ರದಿಂದ ರೈತರಿಗೆ ಸೇವೆ ನೀಡಿರುತ್ತಾರೆ. ಗದಗ ಜಿಲ್ಲೆಯ 5 ಸೇವಾ ಕೇಂದ್ರಗಳಾದ ಹುಲಕೋಟಿ (ಮುಳಗುಂದ) , ನರೇಗಲ್ , ಮುಂಡರಗಿ , ನರಗುಂದ, ಶಿರಹಟ್ಟಿ ಹೋಬಳಿ ಮಟ್ಟದಲ್ಲಿ ಅಳವಡಿಸಲಾದ ಸೇವಾ ಕೇಂದ್ರಗಳು, ಸದರಿ ಸೇವಾ ಕೇಂದ್ರಗಳು ನಡೆಸಲು ಇಚ್ಛೆಪಟ್ಟ ನೋಂದಾಯಿತ ರೈತ ಉತ್ಪಾದಕ ಸಂಘ-ಸಂಸ್ಥೆಗಳು / ಕೃಷಿ ಯಂತ್ರೋಪಕರಣಗಳ ತಯಾರಿಕಾ ಸಂಸ್ಥೆಗಳು / ಸ್ವ-ಸಹಾಯ ಸಂಘಗಳು / ಜಿಲ್ಲಾ ಸಾವಯುವ ಮತ್ತು ಸಿರಿಧಾನ್ಯಗಳ ಒಕ್ಕೂಟಗಳು ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 12 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಗದಗ ಇಲ್ಲಿ ಸಂಪರ್ಕಿಸಬಹುದಾಗಿದೆ.

# ಗೀತೆಯ ಸಂದೇಶಗಳು ಬದುಕಿಗೆ ಸೋಪಾನ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಶ್ರೀ ಪಾಂಡುರಂಗ ದೇವಸ್ಥಾನದಲ್ಲಿ ಶ್ರೀಮಾತಾ ಹಿಂಗುಲಾಂಭಿಕಾ ಮಹಿಳಾ ಮಂಡಳಿಯವರು ಬುಧವಾರ ರಾತ್ರಿ ಕೃಷ್ಣ ಜನ್ಮಾಷ್ಟಮಿ ನಿಮಿತ್ತ ಶ್ರೀ ಕೃಷ್ಣನ ತೊಟ್ಟಿಲೋತ್ಸವ ನೆರವೇರಿಸಿದರು.

ಈ ವೇಳೆ ಮಾತನಾಡಿದ ಮಂಡಳದ ಅಧ್ಯಕ್ಷೆ ರುಕ್ಮೀಣಿ ರಾಂಪುರೆ, ದುಷ್ಟರ ಶಿಕ್ಷಕ, ಶಿಷ್ಟರ ರಕ್ಷಕ ಶ್ರೀಕೃಷ್ಣ ಪರಮಾತ್ಮ ಈ ಜಗದ ಲೋಕೋದ್ಧಾರಕನಾಗಿದ್ದಾನೆ. ಭಗವದ್ಗೀತೆಯ ಮೂಲಕ ಶ್ರೀ ಕೃಷ್ಣ ಪರಮಾತ್ಮ ಬೋಧಿಸಿದ ಜೀವನ ಧರ್ಮ, ಮೌಲ್ಯ, ಆಧ್ಯಾತ್ಮಿಕ ಸಂದೇಶಗಳು ಬದುಕಿನ ಸೋಪಾನಗಳಾಗಿವೆ. ನಿತ್ಯದ ಬದುಕಿನಲ್ಲಿ ಶ್ರೀಕೃಷ್ಣ ಬೋಧಿಸಿದ ತತ್ವ, ಸಂದೇಶ, ವಿಚಾರಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಲಕ್ಷ್ಮೀಬಾಯಿ ಮಾತಾಡೆ, ಲಾವಣ್ಯ ತಾಂದಳೆ, ಸುನಂದಾ ಮೆಹರವಾಡೆ, ಅಕ್ಷತಾ ಬಸವಾ, ಸಂಗೀತಾ ಸರ್ವದೆ, ಲತಾ ಮಹೇಂದ್ರಕರ, ಕಲಾವತಿ ಜಾಧವ, ಲಕ್ಷ್ಮೀ ಬೇಂದ್ರೆ, ಲಾವಣ್ಯ ತಾಂದಳೆ, ವೈಷ್ಣವಿ ಸರ್ವದೆ, ಪುಷ್ಪಾ ಬದಿ, ಗಾಯತ್ರಿ ಮಾಂಡ್ರೆ, ವಿದ್ಯಾ ಮಾಂಡ್ರೆ, ಮಾಲಾ ಹವಳೆ ಮುಂತಾದವರಿದ್ದರು.

## ಪುರಾಣ ಪ್ರವಚನ ಧರ್ಮ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಸಜ್ಜನರ ಒಡನಾಟದಿಂದ ಶ್ರೇಷ್ಠ ಫಲ ಪ್ರಾಪ್ತಿ



> ವಿಚಾರ ವಿಮರ್ಶೆಗಳು ಸಂಸ್ಕೃತಿಯ ಮೇಲೆ ಹೊಸ ಬೆಳಕು ಮೂಡಿಸಬೇಕಲ್ಲದೇ ನಾಸ್ತಿಕರನ್ನಾಗಿ ಮಾಡಬಾರದು. ಎಲ್ಲ ರಂಗಗಳಲ್ಲಿ ಸಂಘಟನೆಗಳು ನಡೆಯಲಿ, ಆದರೆ ಸಂಘರ್ಷಗಳು ನಡೆಯಬಾರದು. ಮನುಷ್ಯನ ವರ್ತನೆಗಳು ಅತಿರೇಕಗೊಂಡಾಗ ದೇವರು ಯಾವ ರೂಪದಲ್ಲಾದರೂ ಬಂದು ಅಹಂಕಾರವನ್ನು ನಾಶಗೊಳಿಸಬಲ್ಲ. ಕತ್ತಲನ್ನು ಮೀರಿ ಬೆಳಕು ನೀಡುವುದರಿಂದಲೇ ದೀಪಕ್ಕೊಂದು ಬೆಲೆ. ಕಷ್ಟಗಳನ್ನು ಮೀರಿ ಬೆಳೆದು ನಿಂತಾಗಲೇ ಬದುಕಿಗೊಂದು ಬೆಲೆ ಬರಲು ಸಾಧ್ಯವಾಗುತ್ತದೆ. ಎಳೆಯ ಬಿದಿರು ಸುಲಭವಾಗಿ ಮಣಿಯುತ್ತದೆ. ಆದರೆ ಬಲಿತ ಬಿದಿರು ಬಗ್ಗದು. ಹಾಗೆಯೇ ಎಳೆಯ ಮನಸ್ಸನ್ನು ತಿದ್ದಿ ತೀಡಬಹುದು. ಆದರೆ ಬಲಿತ ಮನಸ್ಸನ್ನು ತಿದ್ದುವುದು ಸುಲಭವಲ್ಲ.
>
> **– ಡಾ. ವೀರಸೋಮೇಶ್ವರ ಜಗದ್ಗುರುಗಳು.**
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

**■ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು**

ಸತ್ವ ಗುಣ ಬೆಳೆಸಿ ಮನಸ್ಸಿನ ಪರಿಶುದ್ಧತೆಯನ್ನುಂಟುಮಾಡಲು ಆದರ್ಶ ವ್ಯಕ್ತಿಗಳ ಮಾರ್ಗದರ್ಶನ ಅವಶ್ಯಕ. ಸಜ್ಜನ, ಸತ್ಪುರುಷರು ಸ್ವಾರ್ಥಿಗಳಲ್ಲ. ಅವರು ಲೋಕ ಚಿಂತಕರು. ಸಜ್ಜನರ ಒಡನಾಟದಿಂದ ಮನುಷ್ಯನಿಗೆ ಶ್ರೇಷ್ಠ ಫಲ ಪ್ರಾಪ್ತಿಯಾಗುತ್ತದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ಶ್ರಾವಣ ಮಾಸದ ಅಂಗವಾಗಿ ಜರುಗಿದ ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮನುಷ್ಯನಲ್ಲಿ ಪ್ರಾಪಂಚಿಕ ವಾಸನೆಗಳು ಸೋಕುವ ಮುನ್ನ ಯೋಗ್ಯ ಸಂಸ್ಕಾರ ಕೊಟ್ಟರೆ ಅವರನ್ನು ಸದ್ಗುಣಿಗಳನ್ನಾಗಿ ಮಾಡಲು ಸಾಧ್ಯವಾಗುವುದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದಲ್ಲಿ ಬೋಧಿಸಿದ್ದಾರೆ. ಬದುಕಿನ ಉನ್ನತಿಗೆ ಧರ್ಮ ಅಡಿಪಾಯವಾಗಿದ್ದು, ಉತ್ತಮರ ಒಡನಾಟದಲ್ಲಿ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನ ಮಾಡಬೇಕಾಗಿದೆ ಎಂದರು.

ಮಾದನ ಹಿಪ್ಪರಗಿ ಹಿರೇಮಠದ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನದಲ್ಲಿ ಮಾತನಾಡಿ ಚಿಂತೆಗಿಂತ ದೊಡ್ಡ ಕಾಯಿಲೆ ಇಲ್ಲ. ಖುಷಿಗಿಂತ ದೊಡ್ಡ ಔಷಧಿ ಯಾವುದು ಇಲ್ಲ. ಮನುಷ್ಯನ ಮನಸ್ಸು ವಿಷಯ ವಾಸನೆಗಳಲ್ಲಿ ಸಿಲುಕಿ ಸಂಕಷ್ಟಕ್ಕೆ ಒಳಗಾಗುತ್ತಿದ್ದಾನೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಶ್ವ ಬಂಧುತ್ವದ ವಿಚಾರಗಳು ಸರ್ವ ಕಾಲಕ್ಕೂ ಸರ್ವರಿಗೂ ಅನ್ವಯಿಸುತ್ತವೆ ಎಂದರು.

ಚಿಕ್ಕಮಗಳೂರಿನ ಶ್ರೀ ಜಗದ್ಗುರು ರೇಣುಕಾಚಾರ್ಯ ಟ್ರಸ್ಟಿನ ಖಜಾಂಚಿ ಉಪ್ಪಳ್ಳಿ ಬಸವರಾಜ, ಆಲ್ದೂರು ಬಿ.ಬಿ ರೇಣುಕಾರ್ಯರು, ಕೆ.ವೀರರಾಜ್, ಎ.ಎಸ್ ಸೋಮಶೇಖರಯ್ಯ, ಎಂ.ಡಿ ಪುಟ್ಟಸ್ವಾಮಿ, ಎಸ್.ಎಂ ದೇವಣ್ಣಗೌಡ, ಬಿ.ಎ ಶಿವಶಂಕರ, ಅ.ಭಾ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ಎಂ ಲೋಕೇಶ, ಹಗರಿಬೊಮ್ಮನಹಳ್ಳಿ ತಿಪ್ಪೆಸ್ವಾಮಿ ಮೊದಲಾದ ಗಣ್ಯರು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಆಶೀರ್ವಾದ ಪಡೆದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ಶಿವಮೊಗ್ಗದ ಶಾಂತಾ ಆನಂದ ಇವರಿಂದ ಭಕ್ತಿ ಗೀತೆ ಜರುಗಿ-ತು. ಶಿಕ್ಷಕ ವೀರೇಶ ಕುಲಕರ್ಣಿ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಚಿಕ್ಕಮಗಳೂರು ಶ್ರೀ ಜಗದ್ಗುರು ರೇಣುಕಾಚಾರ್ಯ ಟ್ರಸ್ಟಿನ 185ನೇ ವಾರ್ಷಿಕ ಸಮಾವೇಶ ಶ್ರೀ ರಂಭಾಪುರಿ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜರುಗಿ, ಕೆಲವು ಮಹತ್ವಪೂರ್ಣ ನಿರ್ಣಯಗಳನ್ನು ಕೈಗೊಳ್ಳಲಾಯಿತು.

# ಲಕ್ಷ್ಮೇಶ್ವರ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

2023-24ನೇ ಸಾಲಿನಲ್ಲಿ ಲಕ್ಷ್ಮೇಶ್ವರ ತಾಲೂಕು ಮಟ್ಟದ ದಸರಾ ಕ್ರೀಡಾ ಕೂಟಗಳನ್ನು ಪುರುಷ ಹಾಗೂ ಮಹಿಳೆಯರಿಗೆ ಸೆಪ್ಟೆಂಬರ್ 11 ರಂದು ಲಕ್ಷ್ಮೇಶ್ವರ ತಾಲೂಕಿನ ಮಾಡಳ್ಳಿ ಗ್ರಾಮದ ಎಮ್.ಜಿ. ಪಾಟೀಲ ಸರಕಾರಿ ಪ್ರೌಢಶಾಲೆ ಮಾಡಳ್ಳಿಯಲ್ಲಿ ನಡೆಸಲಾಗುವುದು. ಆಸಕ್ತ ಕ್ರೀಡಾಪಟುಗಳು ತಮ್ಮ ಹೆಸರನ್ನು ಸೆಪ್ಟೆಂಬರ್ 10 ರೊಳಗಾಗಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ಲಕ್ಷ್ಮೇಶ್ವರ ತಾಲೂಕು ಇವರಲ್ಲಿ ನೊಂದಾಯಿಸಿಕೊಳ್ಳುವುದು. ಸೆಪ್ಟೆಂಬರ್ 11 ರಂದು ಮುಂಜಾನೆ 9 ಗಂಟೆಗೆ ಉದ್ಘಾಟನೆ ಸಮಾರಂಭವನ್ನು ನಡೆಸಲಾಗುವುದು. ಸದರಿ ಉದ್ಘಾಟನಾ ಸಮಾರಂಭಕ್ಕೆ ಲಕ್ಷ್ಮೇಶ್ವರ ತಾಲೂಕಿನ ಆಸಕ್ತ ಕ್ರೀಡಾಪಟುಗಳು ಹಾಜರಿರುವುದು. ನೋಂದಾಯಿತ ಯುವಕ/ಯುವತಿ ಸಂಘಗಳು ಮಾತ್ರ ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶವಿದೆ. ಈ ಕೆಳಕಂಡಂತೆ ಕ್ರೀಡಾಕೂಟಗಳನ್ನು ಏರ್ಪಡಿಸಲಾಗುವುದು.

**ದಸರಾ ಕ್ರೀಡಾ ಕೂಟದ ಸ್ಪರ್ಧೆಗಳ ವಿವರ:**

**ಪುರುಷರಿಗಾಗಿ ಅಥ್ಲೆಟಿಕ್ಸ್ ಸ್ಪರ್ಧೆಗಳು**

100ಮೀ. 200ಮೀ, 400ಮೀ. 800ಮೀ. 1500ಮೀ. 5000ಮೀ 10000ಮೀ

ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ ಜಾವಲಿನ ಎಸೆತ, ಚಕ್ರ ಎಸೆತ, 110ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ.ರಿಲೇ

**ಗುಂಪು ಸ್ಪರ್ಧೆಗಳು**

ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಪುಟ್‌ಬಾಲ್, ಯೋಗ.

**ಮಹಿಳೆಯರಿಗಾಗಿ ಅಥ್ಲೆಟಿಕ್ಸ್:**

100ಮೀ. 200ಮೀ, 400ಮೀ. 800ಮೀ. 1500ಮೀ. 3000,ಮೀ ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ, ಜಾವಲಿನ ಎಸೆತ, ಚಕ್ರ ಎಸೆತ, 100ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ.

**ಗುಂಪು ಸ್ಪರ್ಧೆಗಳು**

ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಯೋಗ

ಲಕ್ಷ್ಮೇಶ್ವರ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಲಕ್ಷ್ಮೇಶ್ವರ ತಾಲೂಕಿನವರೇ ಆಗಿರಬೇಕು. ಹಾಗೂ ಆಧಾರ ಕಾರ್ಡ್ ಅಥವಾ ಗ್ರಾಮ ಪಂಚಾಯತಿಯ ರಹವಾಸಿ ಪತ್ರ ಸದರಿ ದಿನದಂದು ಹಾಜರಪಡಿಸುವುದು. ನೋಂದಾಯಿತ ಯುವಕ/ಯುವತಿ ಸಂಘಗಳು ಮಾತ್ರ ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಚಂದ್ರಶೇಖರ ಯಲ್ಲಪ್ಪ ಮೇಲಿನಮನಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ಲಕ್ಷ್ಮೇಶ್ವರ ದೂರವಾಣಿ ಸಂ:8618320040 ಮೂಲಕ ಸಂಪರ್ಕಿಸಬಹುದಾಗಿದೆ.

# ಜಿಲ್ಲೆಯ 71 ಸಂಸ್ಥೆಗಳ ಲೈಸನ್ಸ್ ರದ್ದು

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲೆಯಲ್ಲಿ ಬರುವ 71 ಹಣಕಾಸು ಸಂಸ್ಥೆ, ಗಿರವಿದಾರರು, ಲೇವಾದೇವಿಗಾರರ ಸಂಸ್ಥೆಗಳನ್ನು ಹಲವಾರು ವರ್ಷಗಳಿಂದ ನವೀಕರಣಗೊಳಿಸದೇ ಇರುವುದರಿಂದ ಲೈಸನ್ಸ್‌ಗಳನ್ನು ರದ್ದುಪಡಿಸಿ ಭದ್ರತಾ ಠೇವಣಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಲಾಗಿರುತ್ತದೆ.

71 ಹಣಕಾಸು ಗಿರವಿದಾರರು ಲೇವಾದೇವಿಗಾರರ ಸಂಸ್ಥೆಗಳ ಯಾದಿಯನ್ನು ಸಹಕಾರ ಸಂಘಗಳ ಉಪನಿಬಂಧಕರು, ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ-125, ಗದಗ ಜಿಲ್ಲೆ, ಗದಗ ಇವರ ಕಚೇರಿಯಲ್ಲಿ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗಿದ್ದು, ಕಚೇರಿಗೆ ಬಂದು ಪರಿಶೀಲಿಸಬಹುದಾಗಿದೆ ಎಂದು ಸಹಕಾರ ಸಂಘಗಳ ಉಪನಿಬಂಧಕರು, ಗದಗ ಜಿಲ್ಲೆ, ಗದಗ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾಲಯ ಉದ್ಘಾಟನೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ ಇವರ ಸಹಯೋಗದಲ್ಲಿ ನಗರದ ಜಿಲ್ಲಾಡಳಿತ ಭವನದಲ್ಲಿ ಸೆಪ್ಟೆಂಬರ್ 8 ರಂದು ಬೆಳಿಗ್ಗೆ 10.30 ಗಂಟೆಗೆ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯದ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ಗೃಹ ಸಚಿವ ಜಿ. ಪರಮೇಶ್ವರ ಮತ್ತು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರುಗಳು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ನರಗುಂದ ಶಾಸಕ ಸಿ.ಸಿ.ಪಾಟೀಲ ಅಧ್ಯಕ್ಷತೆ ವಹಿಸುವರು.

ಮುಖ್ಯಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಲಕ್ಕುಂಡಿ ಗ್ರಾಮ ಪಂಚಾಯತ ಅಧ್ಯಕ್ಷ ಕೆಂಚಪ್ಪ ಪೂಜಾರ, ಉಪಾಧ್ಯಕ್ಷರಾದ ಪುಷ್ಪಾ ಪಾಟೀಲ, ವಾಣಿಜ್ಯ ತೆ-ರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ ಆಗಮಿಸುವರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಗಂಗಪ್ಪ ಎಮ್, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ವರ ವಿಭೂತಿ ಸರ್ವರಿಗೂ ಸ್ವಾಗತ ಕೋರಿದ್ದಾರೆ.

# 'ಮಿಸ್ ಶೆಟ್ಟಿ-ಮಿಸ್ಟರ್ ಪೋಲಿ ಶೆಟ್ಟಿ' ಯಶಸ್ಸಿಗೆ ಪೂಜೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಜಯ ಕರ್ನಾಟಕ ಜನಪರ ವೇದಿಕೆಯ ರಾಜ್ಯ ಯುವ ಸಂಸ್ಥಾಪಕ ಅಧ್ಯಕ್ಷ ಬಿ ಗುಣರಂಜನ್ ಶೆಟ್ಟಿ ಅವರ ಸಹೋದರಿ ಅನುಷ್ಕಾ ಶೆಟ್ಟಿ ನಟಿಸಿರುವ 'ಮಿಸ್ ಶೆಟ್ಟಿ-ಮಿಸ್ಟರ್ ಪೋಲಿ ಶೆಟ್ಟಿ' ಚಿತ್ರವು ಶತದಿನೋತ್ಸವ ಆಚರಿಸಲಿ ಎಂದು ಹಾರೈಸಿ, ಗದುಗಿನ ಗಾನಯೋಗಿ ಪಂ. ಪುಟ್ಟರಾಜ ಕವಿ ಗವಾಯಿಗಳವರ ಸನ್ನಿಧಾನದಲ್ಲಿ ಅಭಿಮಾನಿಗಳು ಪೂಜೆ ಸಲ್ಲಿಸಿದರು. ಜಯ ಕರ್ನಾಟಕ ಜನಪರ ವೇದಿಕೆಯ ರಾಜ್ಯ ಉಪಾಧ್ಯಕ್ಷರಾದ ಹಾಲಪ್ಪ ವರವಿ, ಗದಗ ಜಿಲ್ಲಾಧ್ಯಕ್ಷ ಸದಾನಂದ ನಂದೆಣ್ಣವರ, ಪ್ರಕಾಶ್ ಹಿರೇಮಠ್, ವೆಂಕಟೇಶ್ ಶಾಂತಗೇರಿ, ವೀರೇಶ್ ಹಿರೇಮಠ್, ಯಲ್ಲಪ್ಪ ಒಳಗೇರಿ, ಹನುಮರೆಡ್ಡಿ ಬಸವರೆಡ್ಡಿ, ದಯಾನಂದ್ ಹಂಡಿ, ಅಶೋಕ್ ತೋಟದ, ಕೆ.ಎಂ ಕೊಟ್ರೇಶ್ ಹಾಗೂ ಸಂಘಟನೆಯ ಸದಸ್ಯರು ಪಾಲ್ಗೊಂಡಿದ್ದರು.

# ಆರಕ್ಷಕರೊಂದಿಗೆ ಸಹಕರಿಸುತ್ತಿರುವ ಗೃಹ ರಕ್ಷಕ ದಳದ ಕಾರ್ಯ ಶ್ಲಾಘನೀಯ-ಕಿರಣ ಕಾಳೆ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಅನಿರೀಕ್ಷಿತ ಘಟನೆಗಳು ನಡೆದಾಗ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆಯೊಂದಿಗೆ ಸಹಕಾರ ನೀಡಿ ಉತ್ತಮ ಸೇವೆ ಸಲ್ಲಿಸುತ್ತಿರುವ ಗೃಹ ರಕ್ಷಕ ದಳದ ಕಾರ್ಯ ಶ್ಲಾಘನೀಯ ಎಂದು ಉದ್ಯಮಿ ಕಿರಣ ಕಾಳೆ ಹೇಳಿದರು.



ಪಟ್ಟಣದ ಸುರೇಶ ಹಳ್ಳಿಕೇರಿ ಅವರ ಮನೆಯಲ್ಲಿ ಮಂಗಳವಾರ ಗೃಹ ರಕ್ಷಕ ದಳದ ವತಿಯಿಂದ ಆಯೋಜಿಸಿದ್ದ ನರೇಗಲ್ಲ ಗೃಹ ರಕ್ಷಕ ದಳದ ಘಟಕದ 20ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಚುನಾವಣೆ ಸೇರಿದಂತೆ ಹಲವಾರು ಕಾರ್ಯಕ್ರಮಗಳಲ್ಲಿ ಹಗಲು-ರಾತ್ರಿಯನ್ನದೇ ಸೇವೆ ಸಲ್ಲಿಸುತ್ತಿರುವ ಗೃಹ ರಕ್ಷಕ ದಳದ ಸೇವೆ ಅಪಾರ. ಪ್ರಾಮಾಣಿಕತೆ, ದಕ್ಷತೆ, ಕರ್ತವ್ಯ ಪಜ್ಞೆ, ಸಹಕಾರ ಮನೋಭಾವನೆ ಮೂಡಿಸಿಕೊಂಡು ಸೇವೆ ಸಲ್ಲಿಸುತ್ತಿರುವ ಗೃಹ ರಕ್ಷಕ ದಳದವರು ಎಂದಿಗೂ ಅಭಿನಂದನಾರ್ಹರು ಎಂದು ಹೇಳಿದರು.

ಗೃಹ ರಕ್ಷಕ ದಳದ ಕಮಾಂಡೆಂಟ್ ಸುರೇಶ ಹಳ್ಳಿಕೇರಿ ಮಾತನಾಡಿ, ಗೃಹ ರಕ್ಷಕ ದಳ ನಿಸ್ವಾರ್ಥ ಸೇವಾ ಕ್ಷೇತ್ರ. ನರೇಗಲ್ಲದಲ್ಲಿ ಘಟಕ ಪ್ರಾರಂಭವಾಗಿ 20 ವರ್ಷಗಳಾಯಿತು. ಗೃಹ ರಕ್ಷಕರು ಸದಾ ಕ್ರಿಯಾಶೀಲರಾಗಿರಬೇಕು. ಉತ್ತಮ ನಡತೆಯೊಂದಿಗೆ ಸೇವೆಯನ್ನು ನಿರ್ವಹಿಸಬೇಕು. ಮುಂಬರುವ ಗಣೇಶ ಹಬ್ಬದ ಬಂದೋಬಸ್ತ ಕರ್ತವ್ಯಕ್ಕೆ ನೀವೆಲ್ಲರೂ ಸಿದ್ಧರಾಗಿರಬೇಕೆಂದು ಕರೆ ನೀಡಿದರು.

ಈ ವೇಳೆ ಮಂಜುನಾಥ ಕಡೆತೋಟದ, ಜಗದೀಶ ಬಂಡಿವಡ್ಡರ, ಪರಸಪ್ಪ ಸಾಬಳೆ, ಪಿ.ಕೆ ಹಡಪದ, ಎಂ.ಬಿ ಗೋಡಿ, ವಿ.ಎಸ್ ಇಟಗಿ, ಎಂ.ಕೆ ಅರಮನಿ, ಎಂ.ಎಲ್ ಸಾಬಳೆ, ಅರುಣ ಕುರುಡಗಿ, ಎಸ್.ಬಿ ಸವಡಿ, ಎ.ಎಸ್ ಲಕ್ಷ್ಮೇಶ್ವರ, ಕೆ.ಎಸ್ ಮಾವಿನಕಾಯಿ, ಎಸ್.ಬಿ ಬೆಲೇರಿ, ವಿ.ವಿ ಇಟಗಿ, ಎಸ್. ಆರ್ ತಳವಾರ ಸೇರಿದಂತೆ ಗೃಹ ರಕ್ಷಕ ದಳದ ಸಿಬ್ಬಂದಿಗಳಿದ್ದರು.

# ಕನಕದಾಸರ ತತ್ವಾದರ್ಶಗಳು ಸಮಾಜದ ಬೆಳಕು

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸಾಹಿತ್ಯ, ಸಂಗೀತ, ಸಂಸ್ಕೃತಿ, ಆಧ್ಯಾತ್ಮಿಕ, ಸಾಮಾಜಿಕ ಕ್ಷೇತ್ರದ ಪ್ರಗತಿಯಲ್ಲಿ ದಾಸರವರೇಣ್ಯರ ಕೊಡುಗೆ ಅಪಾರ. ಅದರಲ್ಲೂ ಕನಕದಾಸರ ಬದುಕು-ಬರಹ, ತೆ-ಽರಿದ ತತ್ವಾದರ್ಶಗಳು ಸಮಾಜಕ್ಕೆ ಬೆಳಕಾಗಿವೆ ಎಂದು ಸಾಹಿತಿ ಸಿ.ಜಿ ಹಿರೇಮಠ ಹೇಳಿದರು.



ಅವರು ಬುಧವಾರ ಪಟ್ಟಣದ ಅಕ್ಕಮಹಾದೇವಿ ದೇವಸ್ಥಾನದಲ್ಲಿ ಶ್ರೀ ಸಿದ್ದೇಶ್ವರ ಸತ್ಸಂಗ ಬಳಗ, ಜಿಲ್ಲಾ ಕದಳಿ ಮಹಿಳಾ ವೇದಿಕೆ, ರಾಜ-ರಾಜೇಶ್ವರಿ ಮಹಿಳಾ ಸಾಹಿತ್ಯ ಮತ್ತು ಅಕ್ಕಮಹಾದೇವಿ ಬಳಗ, ಶರಣ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ನಡೆಯುತ್ತಿರುವ 'ಶ್ರಾವಣ ಸಂಜೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬದುಕು ಸುಮಧುರ ಗಾನಸುಧೆಯನ್ನು ನೀಡುವ ದಿವ್ಯ ವೀಣೆಯಾಗಿದ್ದು, ಅದರಿಂದ ಸುಮಧುರ ನಾದ ಹೊಮ್ಮಲು ಸಂತರ, ಶರಣರ, ಸಾತ್ವಿಕ ಜೀವಿಗಳ ಸಂತ್ಸಂಗ, ಪ್ರವಚನ, ಉಪನ್ಯಾಸ ಬೇಕು. ಇಂತಹ ಕಾರ್ಯಕ್ರಮಗಳು ಜನರ ಮನಸ್ಸನ್ನು ಕಟ್ಟಿ, ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಸಹಾಯಕಾರಿಯಾಗುತ್ತವೆ ಎಂದು ಹೇಳಿದರು. ನಿವೃತ್ತ ಶಿಕ್ಷಕ ಎಸ್.ಬಿ ಕೊಣ್ಣೂರ, ದಾಸ ಸಾಹಿತ್ಯದಲ್ಲಿ ಕನಕರು ವಿಷಯ ಕುರಿತು ಉಪನ್ಯಾಸ ನೀಡಿ, ಜಾತಿ ಪದ್ಧತಿ, ಬಡವ-ಬಲ್ಲಿದ ಎಂಬ ತಾರತಮ್ಯ ಹೋಗಲಾಡಿಸಿ ಸಮಸಮಾಜ ನಿರ್ಮಾಣಕ್ಕಾಗಿ ಕೀರ್ತನೆಗಳ ಅಸ್ತ್ರ ಪ್ರಯೋಗಿಸಿದರು. ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆ ಎಂದು ಬಣ್ಣಿಸುವ ಕನಕದಾಸರ ಕೊಡುಗೆ ಅನನ್ಯ. ಅವರ ಚಿಂತನೆಗಳನ್ನು ಎಲ್ಲರೂ ಬದುಕಿನಲ್ಲಿ ಅಳವಡಿಸಿಕೊಳ್ಳೋಣ ಎಂದರು.

ಅಥಿಗಳಾಗಿ ಆಗಮಿಸಿದ್ದ ಬಾಬುರಾವ್ ವೆರ್ಣೇಕರ, ಮಹೇಶ ಲಿಂಬಯ್ಯಸ್ವಾಮಿಮಠ ಮಾತನಾಡಿದರು. ತಾಲೂಕಾ ಪತ್ರಕರ್ತರ ಸಂಘದ ಅಧ್ಯಕ್ಷ ಮಲ್ಲು ಕಳಸಾಪುರ, ಶರಣೆ ಪ್ರತಿಮಾ ಮಹಾಜನಶೆಟ್ಟರ ಕನಕಾಸರ ಕೀರ್ತನೆ ಪ್ರಸ್ತುತಪಡಿದರು. ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ನಿರ್ಮಲಾ ಅರಳಿ, ಅಶ್ವಿನಿ ಅಂಕಲಕೋಟಿ, ನಂದಿನಿ ಮಾಳವಾಡ, ಶೋಭಾ ಗಾಂಜಿ, ಕುಸುಮಾ ಮಲ್ಲಾಡದ ನಿರ್ವಹಿಸಿದರು.


ಕರ್ನಾಟಕ ಸರ್ಕಾರ (ಮೀನುಗಾರಿಕೆ ಇಲಾಖೆ)

**ಮೀನುಗಾರಿಕೆ ಸಹಾಯಕ ನಿರ್ದೇಶಕರು, ಗದಗ**

**ಆದೇಶ ಸಂ:ಪಸಂಮೀ/125ಮೀಇಇ/2013, ಬೆಂಗಳೂರು ದಿನಾಂಕ:21-02-2014 ರಂತೆ ಮತ್ತು ಆದೇಶ ಸಂ:ಪಸಂಮೀ/ಇ-84/ಮೀಇಇ/2022, ಬೆಂಗಳೂರು ದಿನಾಂಕ:25/05/2022 ಮತ್ತು ಆದೇಶ ಸಂ:ಪಸಂಮೀ/ಇ-70/ಮೀಇಇ/2022, ಬೆಂಗಳೂರು ದಿನಾಂಕ:18/06/2022**

**ಅನುಬಂಧ-12**

ಇ ಟೆಂಡರ ಪ್ರಕಟಣೆ ಸಂಖ್ಯೆ: DOF/2023-24/SE0210 ದಿನಾಂಕ : 06-09-2023

**ಇ-ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಗದಗ ಜಿಲ್ಲೆಯ ಗದಗ, ಗಜೇಂದ್ರಗಡ, ನರಗುಂದ, ರೋಣ ತಾಲ್ಲೂಕಿನ ಈ ಕೆಳಕಂಡ ಸರ್ಕಾರಿ ಜಲಸಂಪನ್ಮೂಲಗಳ (ಕೆರೆಗಳ, ಇತ್ಯಾದಿ) ಮೀನು ಪಾಶುವಾರು ಹಕ್ಕನ್ನು 2023-24 ನೇ ಮೀನುಗಾರಿಕೆ ಫಸಲಿ ವರ್ಷ ದಿಂದ 2027-28 ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಾಂಕ : 01/07/2023 ರಿಂದ 30/06/2028 ವರೆಗೆ) ಒಟ್ಟು 5 (ಐದು) ವರ್ಷಗಳ ಅವಧಿಗೆ ಇ-ಟೆಂಡರು ಮೂಲಕ ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿಯನ್ವಯ ಸರ್ಕಾರದ ಮೀನುಗಾರಿಕೆ ಇಲಾಖೆಯ ಷರತ್ತು ನಿಬಂಧನೆಗಳಿಗೊಳಪಟ್ಟಂತೆ ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರ ಇ-ಸಂಗ್ರಹಣಾ ಪೋರ್ಟಲ್ **(https://kppp.karnataka.gov.in)** ಮೂಲಕ ಟೆಂಡರ್ ಅಹ್ವಾನಿಸಲಾಗಿದೆ. ಮೀಸಲಾತಿ ಕಲ್ಪಿಸಿದ ಕೆರೆಗಳಿಗೆ ಮೊದಲ ಆದ್ಯತೆಯನ್ನು ಸ್ಥಳೀಯ ತಾಲ್ಲೂಕಿನ ಬಿಡ್ ದಾರರಿಗೆ ನೀಡಿ, ನಂತರ ಅದೇ ಜಿಲ್ಲೆಯ ಇತರೆ ತಾಲ್ಲೂಕಿನ ಬಿಡ್ ದಾರರನ್ನು ಪರಿಗಣಿಸಲಾಗುವದು. ಬೇರೆ ಜಿಲ್ಲೆಯವರಿಗೆ ಮೀಸಲಾತಿ ಕಲ್ಪಿಸಿದ ಕೆರೆಗಳಿಗೆ ಬಿಡ್ ಮಾಡಲು ಅವಕಾಶವಿರುವದಿಲ್ಲ.

**ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಸರ್ಕಾರಿ ಜಲಸಂಪನ್ಮೂಲಗಳ (ಕೆರೆ) ವಿವರಗಳು**

| ಕ್ರ. ಸಂ | ಇ-ಟೆಂಡರ್ ಐಟಂ ಕೋಡ್ ನಂಬರ್ | ಕೆರೆ/ಜಲಸಂಪನ್ಮೂಲದ ಹೆಸರು | ಗ್ರಾಮದ ಹೆಸರು | ಜಲ ವಿಸ್ತೀರ್ಣ | ಅಚ್ಚುಕಟ್ಟು ಪ್ರದೇಶ | ಭದ್ರತಾ ಠೇವಣಿ (ರೂ.ಗಳಲ್ಲಿ) | ಸರ್ಕಾರಿ ಸವಾಲ್ ಮೊತ್ತ (ರೂ.ಗಳಲ್ಲಿ) | ನಿಗದಿ ಪಡಿಸಿದ ಮೀಸಲಾತಿ |
|---|---|---|---|---|---|---|---|---|
| **ಗದಗ** | | | | | | | | |
| 1 | GDGgdg01202324 | ಹರ್ತಿ ಇಂಗು ಕೆರೆ | ಹರ್ತಿ | 12.14 | 60.00 | 278 | 1850 | ಸಾಮಾನ್ಯ |
| 2 | GDGgdg02202324 | ಹರ್ಲಾಪೂರ ಕೆರೆ | ಹರ್ಲಾಪೂರ | 14.00 | 43 | 1765 | 11765 | ಸಾಮಾನ್ಯ |
| 3 | GDGgdg03202324 | ಗೌಡನ ಕೆರೆ | ಸೀತಾಲಹರಿ | 16 | – | 360 | 2400 | ಸಾಮಾನ್ಯ |
| **ರೋಣ** | | | | | | | | |
| 1 | GDGgdg04202324 | ನಿಡಗುಂದಿ ಕೆರೆ | ನಿಡಗುಂದಿ | 8 | 48 | 602 | 4015 | ಸಾಮಾನ್ಯ |
| 2 | GDGgdg05202324 | ಪರಂಪೋರ ಕೆರೆ | ರೋಣ | 6.69 | – | 158 | 1050 | ಪರಿಶಿಷ್ಟ ಜಾತಿ |
| 3 | GDGgdg06202324 | ಪರಂಪೋರ ಸರಪಂಚ ಕೆರೆ | ರೋಣ | 2.64 | – | 60 | 400 | ಸಾಮಾನ್ಯ |
| **ಗಜೇಂದ್ರಗಡ** | | | | | | | | |
| 1 | GDGgdg07202324 | ಗಜೇಂದ್ರಗಡ ಇಂಗು ಕರೆ | ಗಜೇಂದ್ರಗಡ | 15.57 | 26.31 | 508 | 3385 | ಪರಿಶಿಷ್ಟ ಜಾತಿ |
| 2 | GDGgdg08202324 | ತೋಟಗಂಟಿ ಕೆರೆ | ನರೇಗಲ್ಲ | 6.82 | – | 158 | 1050 | ಪರಿಶಿಷ್ಟ ಜಾತಿ |
| 3 | GDGgdg09202324 | ಹಿರಿಕೆರೆ | ನರೇಗಲ್ಲ | 11.7 | – | 270 | 1800 | ಸಾಮಾನ್ಯ |
| **ನರಗುಂದ** | | | | | | | | |
| 1 | GDGgdg10202324 | ಬಸವಣ್ಣನ ಕೆರೆ | ಕಸಬಾ | 1.00 | – | 45 | 300 | ಸಾಮಾನ್ಯ |
| 2 | GDGgdg11202324 | ಸೋಮಾಪುರ ಕೆರೆ | ಸೋಮಾಪೂರ | 4.44 | – | 105 | 700 | ಸಾಮಾನ್ಯ |
| 3 | GDGgdg12202324 | ಪಡವಗೊಂಡ ಕೆರೆ | ದಂಡಾಪೂರ | 5.32 | – | 120 | 800 | ಸಾಮಾನ್ಯ |

**ಇ-ಟೆಂಡರ್ ವೇಳಾಪಟ್ಟಿ :** (1) ಇ-ಟೆಂಡರ್ ದಸ್ತಾವೇಜು ಪಡೆಯುವ ದಿನಾಂಕ : **06-09-2023** (2) ಇ-ಟೆಂಡರ್ ಬಿಡ್ ಸಲ್ಲಿಕೆ ಅಂತಿಮ ದಿನಾಂಕ ಮತ್ತು ಸಮಯ : **25-09-2023** 17:30 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ಸ್ಥಳ : **27-09-2023** 11:01 ಮೀನುಗಾರಿಕೆ ಉಪನಿರ್ದೇಶಕರು ಗದಗ ಕಚೇರಿ (4) ಆರ್ಥಿಕ್ ಬಿಡ್ ತೆರೆಯುವ ದಿನಾಂಕ & ಸಮಯ : ಸ್ಥಳ : **29-09-2023** 11:02 ಮೀನುಗಾರಿಕೆ ಉಪನಿರ್ದೇಶಕರು ಗದಗ ಕಚೇರಿ ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನವರಿಗೆ ಸಂಪರ್ಕಿಸಬಹುದು : ಮೀನುಗಾರಿಕೆ ಸಹಾಯಕ ನಿರ್ದೇಶಕರು ಗದಗ. ಮೋ ಸಂಖ್ಯೆ: **9880210505**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/168/2023-24 **ಸಹಿ/- ಮೀನುಗಾರಿಕೆ ಸಹಾಯಕ ನಿರ್ದೇಶಕರು, ಗದಗ**

# ಥರ್ಡ್- ಐ ಕಮಾಂಡ್, ಕಂಟ್ರೋಲ್ ಸೆಂಟರ್‌ನ ಉದ್ಘಾಟನಾ ಸಮಾರಂಭ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಗದಗ-ಬೆಟಗೇರಿ ಅವಳಿ ನಗರಕ್ಕೆ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ-4 ಯೋಜನೆ ಅಡಿಯಲ್ಲಿ ಥರ್ಡ್- ಐ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ನ ಉದ್ಘಾಟನಾ ಸಮಾರಂಭವನ್ನು ನಗರದ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಾರ್ಯಾಲಯದಲ್ಲಿ ಸೆಪ್ಟೆಂಬರ್ 8 ರಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ರಾಜ್ಯದ ಗೃಹ ಸಚಿವರಾದ ಡಾ.ಜಿ. ಪರಮೇಶ್ವರ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ರಾಜ್ಯದ ಐ.ಜಿ.ಪಿ ಮತ್ತು ಡಿಜಿ ಡಾ.ಅಲೋಕ್ ಮೋಹನ್, ರಾಜ್ಯದ ಎ.ಡಿ.ಜಿ.ಪಿ. ಸಿ.ಟಿ.ಆರ್.ಎಸ್. ಅಲೋಕ್ ಕುಮಾರ್ , ಬೆಳಗಾವಿ ಉತ್ತರ ವಲಯದ ಐ.ಜಿ.ಪಿ. ವಿಕಾಶ್ ಕುಮಾರ್ ವಿಕಾಶ್ , ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ ಆಗಮಿಸುವರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ ಸರ್ವರಿಗೂ ಸ್ವಾಗತ ಕೋರಿದ್ದಾರೆ.

### ತಾ.ಪಂ ಸಭಾಭವನದಲ್ಲಿ ಜರುಗಿದ ಸಾಮಾನ್ಯ ಸಭೆ: ಬರ ಪೀಡಿತ ಪ್ರದೇಶ ಘೋಷಣೆಗೆ ವರದಿ

# ಆರೋಗ್ಯ, ಕೃಷಿ, ಪಶು ಇಲಾಖೆಗಳಲ್ಲಿ ಹುದ್ದೆಗಳು ಖಾಲಿ



■ವಿಜಯಸಾಕ್ಷಿ ಸುದ್ದಿ, ರೋಣ

ರೋಣ ಹಾಗೂ ಗಜೇಂದ್ರಗಡ ತಾಲೂಕುಗಳಲ್ಲಿ ಮಳೆ ಕೊರತೆಯಿಂದ ಶೇ.50ಕ್ಕಿಂತಲೂ ಹೆಚ್ಚು ಪ್ರದೇಶದಲ್ಲಿ ಬಿತ್ತನೆ ಕುಂಠಿತವಾಗಿದ್ದು, ಮಳೆ ಕೊರತೆಯಿಂದ ಬಿತ್ತಿದ ಬೆಳೆಗಳು ಬಾಡಿವೆ. ಹೀಗಾಗಿ ಜಂಟಿ ಸಮೀಕ್ಷೆ ಸರ್ವೆ ಕಾರ್ಯವನ್ನು ನಡೆಸುವ ಮೂಲಕ ಎರಡೂ ತಾಲೂಕುಗಳನ್ನು ಬರ ಪೀಡಿತ ಪ್ರದೇಶ ಎಂದು ಘೋಷಿಸಲು ಸರಕಾರಕ್ಕೆ ವರದಿ ಸಲ್ಲಿಕೆ ಮಾಡಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ರವೀಂದ್ರ ಪಾಟೀಲ ಹೇಳಿದರು.

ಅವರು ಗುರುವಾರ ತಾ.ಪಂ ಸಭಾಭವನದಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರು.

ತಾ.ಪಂ ಇಒ ರವಿ ಎ.ಎನ್ ಅವರು ರವೀಂದ್ರ ಪಾಟೀಲರನ್ನು ಉದ್ದೇಶಿಸಿ, ತಾಲೂಕಿನಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದ್ದು, ಬೆಳೆಗಳ ಸ್ಥಿತಿ ಹೇಗಿದೆ ಎಂದು ಪ್ರಶ್ನಿಸಿದಾಗ ಈಗಾಗಲೇ ಕಂದಾಯ, ತೋಟಗಾರಿಕೆ, ಕೃಷಿ ಇಲಾಖೆಯಿಂದ ಜಂಟಿ ಸರ್ವೆ ನಡೆಸಿದ್ದು, ವರದಿ ಸಲ್ಲಿಸಿದ್ದೇವೆ. ತಾಲೂಕಿನಲ್ಲಿ ಶೇ.28ರಷ್ಟು ರೈತರು ಹೆಸರು ಬೆಳೆಯನ್ನು ಬೆಳೆದು ವಿಮಾ ಹಣವನ್ನೂ ಪಾವತಿಸಿದ್ದಾರೆ. ಶೀಘ್ರದಲ್ಲಿಯೇ ವಿಮಾ ಕಂತು ಪಾವತಿಸಿದ ರೈತರಿಗೆ ವಿಮಾವನ್ನು ರೈತರಿಗೆ ಒದಗಿಸಲಾಗುವುದು ಎಂದರು. ಆರೋಗ್ಯ, ಕೃಷಿ, ಪಶು ವೈದ್ಯಕೀಯ ಇಲಾಖೆಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇರುವುದರಿಂದ ಪ್ರಗತಿ ಕುಂಠಿತವಾಗಲು ಕಾರಣವಾಗಿದೆ. ಆದರೂ ಸಹ ಇರುವ ಸಿಬ್ಬಂದಿಗಳಿಂದಲೇ ಹೆಚ್ಚಿನ ಕೆಲಸವನ್ನು ಪಡೆದುಕೊಳ್ಳುವ ಮೂಲಕ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸಲಾಗುತ್ತಿದೆ ಎಂದು ಡಾ. ಬಿ.ಎಸ್ ಭಜಂತ್ರಿ, ಡಾ. ಕುರಹಟ್ಟಿ, ಕೃಷಿ ಇಲಾಖೆಯ ರವೀಂದ್ರ ಪಾಟೀಲ ಸಭೆಯ ಗಮನಕ್ಕೆ ತಂದರು. ಇಒ ರವಿ ಎ.ಎನ್ ಅವರು ಈ ವಿಷಯವನ್ನು ಶಾಸಕರ ಗಮನಕ್ಕೆ ತರುವ ಮೂಲಕ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮುಖ್ಯವಾಗಿ ಶಾಲೆ ಮತ್ತು ಅಂಗನವಾಡಿಗಳಲ್ಲಿ ಸ್ವಚ್ಛತೆಯ ಬಗ್ಗೆ ನಿಗಾ ವಹಿಸಬೇಕು ಎಂದು ತಿಳಿಸಿದರು. ನಂತರ ಅವರು ವಿವಿಧ ಇಲಾಖೆಗಳ ಪ್ರಗತಿ ವರದಿಯನ್ನು ಆಲಿಸಿದರು. ಯೋಜನಾಧಿಕಾರಿ ಸಿ.ಎಸ್ ನಿಲಗುಂದ, ನರೇಗಾ ಅಧಿಕಾರಿ ರಿಯಾಜ ಖತೀಬ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

> ಶಿಕ್ಷಣ ಇಲಾಖೆಯವರೇ ನಿಷ್ಕಾಳಜಿ ವಹಿಸಿದರೆ ಸಹಿಸಲು ಸಾಧ್ಯವಿಲ್ಲ. ತಾಲೂಕಿನಲ್ಲಿ ಒಟ್ಟು 21 ಮಕ್ಕಳು ಶಾಲೆಗೆ ಬಾರದ ಮಕ್ಕಳಾಗಿದ್ದು, ಇದು ಗಂಭೀರ ವಿಚಾರವಾಗಿದೆ. ಅಕ್ಷರ ಜ್ಞಾನದಿಂದ ವಂಚಿತರಾದ ಮಕ್ಕಳಿಗೆ ವಯಸ್ಸಿನ ಆಧಾರದಲ್ಲಿ ತರಗತಿಗಳಿಗೆ ದಾಖಲಿಸಿಕೊಳ್ಳುವ ಕೆಲಸ ಈ ತಿಂಗಳಲ್ಲಿ ಮುಗಿಯಬೇಕು. ಅವರಿಗೂ ಅವರ ಹಕ್ಕಿನ ಶಿಕ್ಷಣ ದೊರಕಬೇಕು.
>
> – ರವಿ ಎ.ಎನ್.
> ಇಒ, ರೋಣ ತಾಲೂಕು ಪಂಚಾಯಿತಿ.

### ಮರೆಯಾಗುತ್ತಿರುವ ಸಾಂಪ್ರದಾಯಿಕ ಜನಪದ ಶೈಲಿಯ ಆಟ ನರೇಗಲ್ಲದಲ್ಲಿ ಇನ್ನೂ ಜೀವಂತ

# ಶ್ರಾವಣ ಮಾಸದ ವಿಶೇಷ ಕಲೆ 'ಕಡಬಡ ಸೋಗು'



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದಲ್ಲಿ ಪ್ರತಿ ಶ್ರಾವಣದಲ್ಲಿ ವಿಶೇಷವಾದ ಸೋಗಿನ ಕಾರ್ಯಕ್ರಮಗಳು ಜರುಗುತ್ತವೆ. ಬೇರೆ ಬೇರೆ ಓಣಿಯ ಜನರು ಕಡಬಡ ಸೋಗು ಹಾಕುವುದರ ಮೂಲಕ ತಮ್ಮಲ್ಲಿನ ಸಾಂಪ್ರದಾಯಿಕ ಕಲೆಯನ್ನು ಪ್ರದರ್ಶಿಸುವುದು ಇದರ ವಿಶೇಷ. ಇಲ್ಲಿ, ಜನಪದ ನೃತ್ಯದ ಮೂಲಕ ದೇವಿ, ರಾಕ್ಷಸರ ನಡುವಿನ ಕಾಳಗವನ್ನು ಪ್ರದರ್ಶಿಸಲಾಗುತ್ತದೆ.

ಈ ಕಡಬಡ ಸೋಗಿನಲ್ಲಿ ದೇವರ ಆರಾಧನೆಯೊಂದಿಗೆ ವಿಶಿಷ್ಟ ಜನಪದವೂ ಅಡಗಿದೆ. ವಿವಿಧ ಭಂಗಿಗಳಲ್ಲಿ ನೃತ್ಯವನ್ನು ಮಾಡುವ ಮೂಲಕ ದೇವಿಯ ಆರಾಧನೆ ಮಾಡುವ ಈ ಸೋಗಿನ ವೈವಿಧ್ಯಮಯ ದೃಶ್ಯಗಳನ್ನು ನೋಡುವುದೇ ಒಂದು ಸೊಬಗು.

ದೇವಿ ಮತ್ತು ರಾಕ್ಷಸರ ನಡುವೆ ನಡೆಯುವ ಹೋರಾಟವನ್ನು ಸೋಗಿನ ಮೂಲಕ ಪ್ರದರ್ಶನ ಮಾಡುವುದೇ ಕಡಬಡ ಸೋಗಿನ ಮೂಲ ಆಶಯ. ಬಹುತೇಕ ರಾಜ್ಯದಲ್ಲಿ ಎಲ್ಲೂ ಕಾಣದ ಸಾಂಪ್ರದಾಯಿಕ ಜನಪದ ಶೈಲಿಯ ಆಟ ನರೇಗಲ್ಲನಲ್ಲಿ ಇನ್ನೂ ರೂಢಿಯಲ್ಲಿದೆ. ಕಡಬಡ ಸೋಗಿನ ವಿಜ್ರಂಭಣೆ ಶ್ರಾವಣ ಮಾಸದಲ್ಲಿ ಪುರಾತನ ಸಂಸ್ಕೃತಿ-ಸಂಪ್ರದಾಯದ ಆಚರಣೆಯ ವೈಭವ ಗರಿಗೆದರುತ್ತದೆ.

ಮಂಗಳವಾರ ದೇವಿಯ ವಾರವಾಗಿರುವದರಿಂದ ಸ್ನೇಹಜೀವಿ ಗೆಳೆಯರ ಬಳಗ ಸಂತೆ ಬಜಾರದ ಯುವಕರು, ಹಿರಿಯರು ಹಮ್ಮಿಕೊಂಡ ಕಡಬಡ ಸೋಗಿನ ನೃತ್ಯ ಮನಸೂರೆಗೊಂಡಿತು. ಪಟ್ಟಣದ ಪ್ರಮುಖ ರಸ್ತೆಯ ಮೂಲಕ ನೃತ್ಯವನ್ನು ಪ್ರದರ್ಶಿಸುತ್ತ ಸಾಗಿದರು.

ಈ ಸಮೂಹ ಸನ್ನಿವೇಶದಲ್ಲಿ ಮುಂದೆ ಇಬ್ಬರು ರಾಕ್ಷಸರು ದೇವಿಯ ಮೇಲೆ ಆಕ್ರಮಣ ಮಾಡಲು ಹವಣಿಸುತ್ತಿರುತ್ತಾರೆ. ದೇವಿ ಅವರನ್ನು ಸಂಹರಿಸಲು ಮುಂದಾಗುವ ಈ ರುದ್ರರಮಣೀಯ ದೃಶ್ಯವನ್ನು ನೋಡಲು ಎರಡು ಕಣ್ಣುಗಳು ಸಾಲವು. ಹತ್ತು ಹಲವು ಪೌರಾಣಿಕ ಪಾತ್ರಗಳ ವೇಷಧಾರಿಗಳು, ದೇವಿಯು ರಾಕ್ಷಸರನ್ನು ಸಂಹರಿಸಲು ಬಂದಾಗ ಆಡುವ ಆಟವನ್ನು ನೋಡುವುದೇ ಒಂದು ಸೊಗಸು.



> ಉತ್ತರ ಕರ್ನಾಟಕದ ಪುರಾತನ ಹಾಗೂ ಜನಪದ ವಿಶೇಷ ಕಲೆಯಾದ ಕಡಬಡ ಸೋಗು ಕೆಲ ಜಿಲ್ಲೆಗಳಲ್ಲಿ ಮಾತ್ರ ಕಂಡು ಬರುತ್ತದೆ. ಈ ಕಲೆ ನಶಿಸಿಹೋಗುವ ಮುನ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದಕ್ಕೆ ಉತ್ತೇಜನ ನೀಡಬೇಕಾಗಿದೆ ಎಂದು ಓಣಿಯ ಹಿರಿಯರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

# ಕಸ ವಿಲೇವಾರಿ ಘಟಕದ ಅವ್ಯವಸ್ಥೆ ಸರಿಪಡಿಸಲು ಮನವಿ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ ಕಸ ವಿಲೇವಾರಿ ಘಟಕದ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸಿ, ಪರಿಸರ ಅಭಿಯಂತರ ಆನಂದ ಬದಿಯವರನ್ನು ಅಮಾನತ್ತು ಮಾಡುವಂತೆ ಕರ್ನಾಟಕ ಮಾದಿಗ ಸಂಘರ್ಷ ಸಮಿತಿ ಗದಗ ಜಿಲ್ಲಾ ಘಟಕದ ಅಧ್ಯಕ್ಷ ರಾಘವೇಂದ್ರ ಪರಸಪ್ಪ ಪರಾಪೂರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಘವೇಂದ್ರ ಪರಾಪೂರ, ಕಸ ವಿಲೇವಾರಿ ಘಟಕ ಅವ್ಯವಸ್ಥೆಗಳಿಂದ ಕೂಡಿದ್ದು, ನಗರಸಭೆಯ ಕಸ ವಿಲೇವಾರಿ ವಾಹನ ಚಾಲಕರು ರಸ್ತೆಗಳಲ್ಲಿ ಸಿಕ್ಕಿಹಾಕಿಕೊಳ್ಳುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಗಾಯಗಳಾಗಿವೆ. ಅಭಿಯಂತರರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಹಾರಿಕೆಯ ಉತ್ತರವನ್ನು ನೀಡುತ್ತಿದ್ದಾರೆ ಎಂದರು.

ಸಾರ್ವಜನಿಕ ಹಕ್ಕು ರಕ್ಷಣೆ ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆಯ ರಾಜ್ಯಾಧ್ಯಕ್ಷ ರಾ.ದೇ ಕಾರಭಾರಿ ಸದರಿ ಪ್ರಕರಣದ ಕುರಿತು ಕ್ರಮಕ್ಕಾಗಿ ಜಿಲ್ಲಾಡಳಿತದ ಗಮನಕ್ಕೂ ತಂದಿದ್ದಾರೆ. ನಗರದ ಸ್ವಚ್ಛತೆಗಾಗಿ ದುಡಿಯುತ್ತಿರುವ ಪೌರಕಾರ್ಮಿಕರ ಸುರಕ್ಷತೆಗಾಗಿ ಮಾನವೀಯತೆಯ ದೃಷ್ಟಿಯಿಂದ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು.

# ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ ಇಂದು

■ವಿಜಯಸಾಕ್ಷಿ ಸುದ್ದಿ, ನರಗುಂದ

ನರಗುಂದ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿ ವತಿಯಿಂದ ಸಮಸ್ತ ರೈತ ಬಾಂಧವರ ಪರವಾಗಿ ರೈತ ವಿರೋಧಿ ಕಾಂಗ್ರೆಸ್ ಸರ್ಕಾರದ ನಿಲುವುಗಳನ್ನು ವಿರೋಧಿಸಿ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಶಿವಾಜಿ ವೃತ್ತದಿಂದ ತಹಸೀಲ್ದಾರ ಕಚೇರಿಯವರೆಗೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಭಾರತೀಯ ಜನತಾ ಪಾರ್ಟಿಯ ವತಿಯಿಂದ ನಾಡಿನ ಸಮಸ್ತ ರೈತ ಬಾಂಧವರ ಪರವಾಗಿ ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ನಿಲುವುಗಳು ಹಾಗೂ ಮಳೆಯ ಅಭಾವದಿಂದ ಉಂಟಾಗಿರುವ ಬರಗಾಲದ ಸಮಸ್ಯೆ, ವಿದ್ಯುತ್ ಅಭಾವದಿಂದ ರೈತರ ಪಂಪ್‌ಸೆಟ್‌ಗಳಿಗೆ ಅನಿಯಮಿತ ಲೋಡ್ ಶೆಡ್ಡಿಂಗ್, ರೈತಪರ ಯೋಜನೆಗಳನ್ನು ರದ್ದುಗೊಳಿಸಿರುವುದು, ರಾಜ್ಯದಲ್ಲಿ ಹೆಚ್ಚುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಡೆಯುವಲ್ಲಿ ವಿಫಲವಾಗಿರುವ ರಾಜ್ಯ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆಯ ಮೂಲಕ ತಹಸೀಲ್ದಾರರ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು.

ಪ್ರತಿಭಟನೆಯಲ್ಲಿ ನರಗುಂದ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಸಿ ಪಾಟೀಲರ ನೇತೃತ್ವದಲ್ಲಿ ಪಕ್ಷದ ಎಲ್ಲ ಪದಾಧಿಕಾರಿಗಳು, ಜಿಲ್ಲೆಯ ಎಲ್ಲ ಮಂಡಳಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪಕ್ಷದ ಹಿರಿಯರು ರೈತ ಬಾಂಧವರು, ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಪೋಷಣ್ ಮಾಸಾಚರಣೆ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಗದಗ


ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ, ನರಗುಂದ ಇವರ ವತಿಯಿಂದ ಪೋಷಣ್ ಮಾಸಾಚರಣೆ ಕಾರ್ಯಕ್ರಮವು ಮಂಗಳವಾರದಂದು ಕುರಗೋವಿನಕೊಪ್ಪ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ-104 ರಲ್ಲಿ ಜರುಗಿತು.

ಕಾರ್ಯಕ್ರಮವನ್ನು ಗ್ರಾ.ಪಂ ಸದಸ್ಯರಾದ ಜಗದೀಶರೆಡ್ಡಿ ದೊಡ್ಡಲಿಂಗಪ್ಪನವರ ಅವರು ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಸ್ವ-ಸಹಾಯ ಸಂಘದ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಏರ್ಪಡಿಸಿ ವಿಜೇತರಿಗೆ ಬಹುಮಾನ ನೀಡಲಾಯಿತು. ಅಲ್ಲದೇ ಶಾಲಾ ಪೂರ್ವ ಶಿಕ್ಷಣ ಚಟುವಟಿಕೆಯಲ್ಲಿ ಕ್ರಿಯಾತ್ಮಕವಾಗಿರುವ ಮಕ್ಕಳಿಗೆ ಬಹುಮಾನ ಕೊಟ್ಟು ಪ್ರೋತ್ಸಾಹಿಸಲಾಯಿತು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ರೂಪಾ ಗಂಧದ ಮಾತನಾಡಿ, ಸರ್ಕಾರದಿಂದ ಅಂಗನವಾಡಿ ಕೇಂದ್ರಗಳ ಮೂಲಕ ವಿವಿಧ ಪೌಷ್ಠಿಕಾಂಶ ಆಹಾರಗಳನ್ನು ನೀಡಲಾಗುತ್ತಿದ್ದು, ಅವುಗಳ ಸದ್ಬಳಕೆಯಿಂದ ಅಲ್ಲದೇ ಮನೆಯ ಸುತ್ತ ಮುತ್ತಲಿನ ಆವರಣದಲ್ಲಿ ಪೌಷ್ಠಿಕ ಕೈ ತೋಟಗಳ ನಿರ್ಮಾಣದಿಂದ ಅಪೌಷ್ಠಿಕತೆ ಹೋಗಲಾಡಿಸಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಂ.ಪಂ ಸದಸ್ಯರಾದ ಯಮನಪ್ಪ ತಳವಾರ, ಶಿಕ್ಷಕರಾದ ಪಿ.ಪಿ.ದೇವಾಂಗಮಠ, ಪೋಷಣ್ ಅಭಿಯಾನ ಕಾರ್ಯಕ್ರಮ ಸಂಯೋಜಕರಾದ ಮಂಜು ಗುಗ್ಗರಿ, ಆರೋಗ್ಯ ಇಲಾಖೆಯ ನೇತ್ರಾವತಿ ಜಗಲಿ(ಸಿ,ಎಚ್,ಓ), ಮಂಜುಳಾ ಕುರಬನಾಳ ಅಂಗನವಾಡಿ ಕಾರ್ಯಕರ್ತೆಯರಾದ ಶಿವಲೀಲಾ ಹಿರೇಮಠ, ಬೇಬಿ ದೊಡ್ಡಮನಿ, ಸಹಾಯಕಿಯರು, ಗರ್ಭಿಣಿಯರು, ಹಿರಿಯ ಮಾತೆಯರು, ಮಕ್ಕಳ ಹಾಜರಿದ್ದರು.



ಗದುಗಿನ ಹಿರಿಯ ಸಾಹಿತಿ ಐ.ಕೆ ಕಮ್ಮಾರ ಅವರ ಮೊಮ್ಮಗ ಆಲಂ ಹುಸೇನ, ಸಿರೀನ್ ಕೌಸರ್ ದಂಪತಿಗಳ ಮಗ ಮಾಹೀರಅಲಿ ಕಮ್ಮಾರ ಶ್ರೀಕೃಷ್ಣ ಜನ್ಮಾಷ್ಟಮಿಯಂದು ಶ್ರೀಕೃಷ್ಣನ ವೇಷಧಾರಿಯಾಗಿ ಎಲ್ಲರ ಗಮನ ಸೆಳೆದರು. ಬಾಪೂಜಿ ಶಾಲೆಯ ಗುರುಮಾತೆಯರು, ಅಜ್ಜಿ ರಜಿಯಾಬೇಗಂ, ಪ್ರೊ. ಆಸ್ಲಂಅಹ್ಮದ ಕಮ್ಮಾರ, ಅಭಿಯಂತರ ಅಕ್ರಮ್‌ಭಾಷಾ ಕಮ್ಮಾರ, ಅನೀಸಾ ಹಾಗೂ ಮಾ. ಅಜ್ಮೈನ್‌ಅಹ್ಮದ ಅಭಿನಂದಿಸಿ, ಶುಭ ಹಾರೈಸಿದರು.

# ಗುರುವಂದನಾ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಸರಕಾರಿ ಹಿರಿಯ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರಲ್ಲಿ 1986-87ನೇ ಸಾಲಿನಲ್ಲಿ 7ನೇ ತರಗತಿವರೆಗೆ ಕಲಿತ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮವನ್ನು ಸೆ.10, ರವಿವಾರ ಮುಂಜಾನೆ 9ರಿಂದ ಸಂಜೆ 4 ಗಂಟೆಯವರೆಗೆ ಶ್ರೀ ಹಳೇ ಬನಶಂಕರಿದೇವಿ ದೇವಸ್ಥಾನದಲ್ಲಿರುವ ಶ್ರೀ ದೇವಾಂಗ ನೌಕರರ ಭವನದಲ್ಲಿ ಆಯೋಜಿಸಲಾಗಿದೆ.

ಈ ಸಮಯದಲ್ಲಿ ವಿದ್ಯಾದಾನ ಮಾಡಿದ ಸಿ.ಎಸ್ ಹರ್ತಿಮಠ, ಎಂ.ಎಂ ಢಾಲಾಯತ ಮತ್ತು ಐ.ಎಚ್ ಶಿರಹಟ್ಟಿ ಗುರುಗಳಿಗೆ ಸನ್ಮಾನ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಎಲ್ಲ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕೆಂದು ರಾಘವೇಂದ್ರ ಕೊಳ್ಳಿ, ರಾಜಬಾಬು ದೀಪಾಲಿ, ಕೃಷ್ಣಾ ದೀಪಾಲಿ, ವಿರುಪಾಕ್ಷ ನೀಲಗುಂದ, ಗುರು ಮಾದಗುಂಡಿ, ಶಂಕರಯ್ಯ ಶಿವಪ್ಪಯ್ಯನಮಠ, ಮಹೇಶ (ರಾಜು) ಕೋಚಿ ಮತ್ತು ಗೆಳೆಯರ ಬಳಗದವರು ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

### ಕೆಜಿಎಂಎಸ್ ಸರ್ಕಾರಿ ಶಾಲೆಯ 'ಅಮೃತ ಭೋಜನ' ಕಾರ್ಯಕ್ರಮದಲ್ಲಿ ಶಾಸಕ ಜಿ.ಎಸ್ ಪಾಟೀಲ

# ದೇಶಾಭಿಮಾನ, ಸಮಯ ಪ್ರಜ್ಞೆಯ ಬಗ್ಗೆ ಪ್ರೇರಣೆ ಸಿಗಲಿ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಅನ್ನಕ್ಕಿರುವ ಶಕ್ತಿ ಜಗತ್ತಿನಲ್ಲಿ ಬೇರಾವುದಕ್ಕೂ ಇಲ್ಲ. ಒಂದು ಕ್ಷಣ ಅನ್ನ ದೊರಕುವುದು ತಡವಾದರೆ ಈ ಶರೀರ ನಡುಗಿ ಹೋಗುತ್ತದೆ. ಅಂತಹ ವಿಶೇಷ ಗುಣವುಳ್ಳ ಅನ್ನಕ್ಕೆ ಅಮೃತ ಭೋಜನ ಎಂದು ಹೆಸರಿಸಿ ಶ್ರಾವಣ ಮಾಸದಲ್ಲಿ ಮಕ್ಕಳಿಗೆ ವೈವಿಧ್ಯಮಯ ಭೋಜನ ಉಣಬಡಿಸುವದರ ಜೊತೆಗೆ ಬಗೆಬಗೆಯ ಪೌಷ್ಟಿಕಾಂಶಗಳನ್ನು ಮಕ್ಕಳಿಗೆ ಒದಗಿಸುವ ಯೋಜನೆ ಅದ್ಭುತವಾದುದು. ಈ ಯೋಜನೆಯನ್ನು ಜಾರಿಗೊಳಿಸಿರುವ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಮುಖ್ಯ ಶಿಕ್ಷಕರು ಮತ್ತು ಸಿಬ್ಬಂದಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವದಾಗಿ ರೋಣ ಶಾಸಕ ಜಿ.ಎಸ್ ಪಾಟೀಲ ಹೇಳಿದರು.

ಪಟ್ಟಣದ ಕೆಜಿಎಂಎಸ್ ಸರ್ಕಾರಿ ಶಾಲೆಯಲ್ಲಿ ಬುಧವಾರ ಶ್ರಾವಣ ಮಾಸದ ನಿಮಿತ್ತ ಅಮೃತ ಭೋಜನ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಸಿಹಿ ಊಟವನ್ನು ಬಡಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದ ಕಲಿಕೆಯ ಘಟ್ಟ ಬಹಳ ಮುಖ್ಯವಾಗಿದೆ. ವಿದ್ಯಾರ್ಥಿಗಳಿಗೆ ದೇಶಾಭಿಮಾನ, ಸಮಯ ಪ್ರಜ್ಞೆಯ ಬಗ್ಗೆ ಈ ಹಂತದಲ್ಲಿಯೇ ಪ್ರೇರಣೆ ಸಿಗಬೇಕು. ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿದ್ದು, ಪೋಷಕರು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸಬೇಕು. ರಾಜ್ಯ ಸರ್ಕಾರವು ಕೂಡ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ, ಮಕ್ಕಳಿಗೆ ಉಚಿತ ಸೌಲಭ್ಯಗಳನ್ನು ನೀಡುತ್ತಿದೆ. ಕೆಜಿಎಂಎಸ್ ಸರ್ಕಾರಿ ಶಾಲೆಯು ರಾಜ್ಯದಲ್ಲಿಯೇ ಮಾದರಿಯಾಗಿದೆ. ನಾನು ಕೂಡ ನನ್ನ ಕ್ಷೇತ್ರದಲ್ಲಿ ಆದಷ್ಟು ಶಾಲೆಗಳಲ್ಲಿ ಈ ತರಹದ ಯೋಜನೆಯನ್ನು ಮುಂದಿನ ದಿನಗಳಲ್ಲಿ ಪ್ರಾರಂಭಿಸುತ್ತೇನೆ ಎಂದರು.

ಬುಧವಾರದ ಅಮೃತ ಭೋಜನವನ್ನು ನಿವೃತ್ತ ಶಿಕ್ಷಕ ಎಂ.ಎಸ್ ಧಡೇಸೂರಮಠ, ನಿವೃತ್ತ ಮುಖ್ಯ ಶಿಕ್ಷಕ ಕೆ.ಎಸ್ ಕಳಕಣ್ಣವರ, ನಿಂಗನಗೌಡ ಲಕ್ಕನಗೌಡ್ರ ವ್ಯವಸ್ಥೆ ಮಾಡಿಸಿದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎನ್ ಹುರುಳಿ, ಎಸ್‌ಡಿಎಂಸಿ ಅಧ್ಯಕ್ಷ ಆನಂದ ಕೊಟಗಿ, ನ್ಯಾಯವಾದಿ ವಿ.ಆರ್ ಗುಡಿಸಾಗರ, ಬಸವರಾಜ ನವಲಗುಂದ, ಪ.ಪಂ ಸದಸ್ಯರಾದ ದಾವೂದಲಿ ಕುದರಿ, ಮುತ್ತಪ್ಪ ನೂಲ್ಕಿ, ಮುಖ್ಯಶಿಕ್ಷಕ ಬಿ.ಬಿ ಕುರಿ, ಶರಣಪ್ಪ ಬೆಟಗೇರಿ, ಎಸ್.ಎ ಪಾಟೀಲ, ಶೇಖಪ್ಪ ಜುಟ್ಲ, ಮೈಲಾರಪ್ಪ ಗೋಡಿ, ಶೇಖಪ್ಪ ಕೆಂಗಾರ, ಅಲ್ಲಾಭಕ್ಷ ನದಾಫ್, ಸಂತೋಷ ಹನುಮಸಾಗರ, ಸುನೀಲ ಬಸವರಡ್ಡೇರ, ಮೈಲಾರಪ್ಪ ಚಳ್ಳಮರದ, ಎಸ್.ಎ ಜಕ್ಕಲಿ, ಕಳಕಪ್ಪ ಅಬ್ಬಿಗೇರಿ, ಪ್ರಕಾಶ ಪಾದಗಟ್ಟಿ, ಜಗದೀಶ ಹೊನವಾಡ, ಈರಪ್ಪ ಜಿರ್ಲ, ಸದ್ದಾಮ್ ನಶೇಖಾನ, ಶಿಕ್ಷಣ ಇಲಾಖೆ, ಶಾಲಾ ಸಿಬ್ಬಂದಿಗಳಿದ್ದರು.

> ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಶಿಕ್ಷಕರ ಹಾಗೂ ಪೋಷಕರ ಪಾತ್ರ ಹೆಚ್ಚಿದೆ. ಪ್ರತಿಯೊಬ್ಬರಿಗೂ ಉಚಿತ ಶಿಕ್ಷಣ ಸಿಗಲು ಸರ್ಕಾರಿ ಶಾಲೆಗಳನ್ನು ಉಳಿಸಿ, ಅಭಿವೃದ್ಧಿಪಡಿಸಬೇಕು. ಈ ಕಾರ್ಯಕ್ಕೆ ಸಮಾಜ ಮತ್ತು ಸಮುದಾಯದ ಸಹಕಾರ ಅಗತ್ಯ. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಒಂದು ತಿಂಗಳು ವಿವಿಧ ತರಹದ ಸಿಹಿ ಭೋಜನ ಏರ್ಪಡಿಸಿದ್ದು ಸಂತೋಷದ ವಿಚಾರ. ಪ್ರತಿನಿತ್ಯ ಅಮೃತ ಭೋಜನದ ವ್ಯವಸ್ಥೆ ಮಾಡಿಸಿದ ಎಲ್ಲ ದಾನಿಗಳಿಗೆ ಧನ್ಯವಾದಗಳು. ಇಂತಹ ಯೋಜನೆ ಎಲ್ಲ ಶಾಲೆಗಳಲ್ಲಿ ನಡೆಯುವಂತಾಗಬೇಕು.
>
> – ಎಂ.ಎ ರಡ್ಡೇರ.
> ಗದಗ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka